## ಉಚಿತ ಪ್ರತಿಗಳಿಗಾಗಿ ಮತ್ತು ಉಚಿತ ಪತ್ರಿಕೆಗಳಿಗಾಗಿ ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ




ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಸಾಕೆ ಪತ್ರ ಬರೆಯಬಹುದು

ನಮ್ಮ ವಿಳಾಸ :

**ದ ಕ್ರಿಸ್ಟಡೆಲ್ಫಿಯನ್ಸ್**


ಅಂಚೆ ಪೆಟ್ಟಿಗೆ ಸಂಖ್ಯೆ 535, ಫ್ರೇಜರ್ ಟೌನ್

ಬೆಂಗಳೂರು - 560 005


# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು


ಸಂಚಿಕೆ 14

* ನೀವೆಂದಿಗೂ ತೀರಾ ಮುದುಕರಲ್ಲ
* ಸುವಾರ್ತೆಯ ಸಂಪತ್ತು
* ನನ್ನ ಬದುಕನ್ನು ಬದಲಿಸಿದ ದಿನಗಳು
* ಹೊಣೆಗಾರಿಕೆ
* ಯೇಸು ಬೇತ್ಸಥಾದಲ್ಲಿ ಒಬ್ಬ ರೋಗಿಯನ್ನು ಸ್ವಸ್ಥಪಡಿಸಿದ್ದು

## ಕ್ರಿಸ್ಟಡೆಲ್ಫಿಯನ್ಸರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೋಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಅಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.

**Co-ordinator : Linus Daniel**

**e-mail :**
**info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.

ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.

ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

**ನೂತನ ಸೃಷ್ಟಿ ಪತ್ರಿಕೆಯ ತಂಡ**

ಲೀನಸ್ ಡ್ಯಾನಿಯಲ್ : ಸಂಯೋಜಕರು.

ಸುಧೀರ್ ಬಿ.ಜಿ : ಪುನರವಲೋಕನ, ಮತ್ತು ಡಿ.ಟಿ.ಪಿ ಸಂಯೋಜಕರು.

ರೀಟಾ ಸತ್ಯರಾಜ್
ರಾಜ್‌ಕುಮಾರ್
ಕ್ರಿಸ್ಟಿ ಪ್ರಭಾ } ಭಾಷಾಂತರಕಾರರು

*"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]*



# ನೀವೆಂದಿಗೂ ತೀರಾ ಮುದುಕರಲ್ಲ

**"ಮುದಿನಾಯಿಗಳಿಗೆ ಹೊಸ ಚಮತ್ಕಾರಗಳನ್ನು ಕಲಿಸುವುದು ಸಾಧ್ಯವಿಲ್ಲ" ಎಂದು ಹೇಳಿಕೆ ನೀಡಿದವರು ನಾಯಿಗಳಿಗೆ ಗಂಭೀರವಾದ ಅನ್ಯಾಯವನ್ನು ಎಸೆಗಿದ್ದಾರೆ. ಅನೇಕ ಬಾರಿ ನಾಯಿಗಳು ತಮ್ಮ ಬಗ್ಗೆ ಮೂರ್ಖ ವ್ಯಾಖ್ಯಾನಗಳನ್ನು ಮಾಡುವವರಿಗಿಂತ ಹೆಚ್ಚು ಬುದ್ಧಿವಂತವಾಗಿರುತ್ತವೆ.**



ಈ ಮೂರ್ಖ ಹೇಳಿಕೆಯನ್ನು ವಯಸ್ಸಾದ ಮನುಷ್ಯರಿಗೆ ಅನ್ವಯಿಸುವುದೂ ಅಷ್ಟೇ ಅನ್ಯಾಯಕರ. ಅದರಲ್ಲೂ ವಯಸ್ಸಾದವರು ಸ್ವತಃ ಈ ಮಾತನ್ನು ನಂಬಿ, ತಾವು ಹೊಸದಾದ ಯಾವುದನ್ನೇ ಕಲಿಯಲು ಸಾಧ್ಯವಾಗದಷ್ಟು ಮುದುಕರು ಎಂದು ಭಾವಿಸಿದಾಗ. ವಾಸ್ತವ ಸಂಗತಿ ಏನಂದರೆ ಕೆಲವರು ಹೊಸದಾಗಿ ಏನನ್ನಾದರೂ ಕಲಿಯಲಾಗದಷ್ಟು ಮುದುಕರಾಗುವುದೇ ಇಲ್ಲ. ಇದು ಕೇವಲ ಸಾಧನೆ ಮತ್ತು ದೃಢನಿಶ್ಚಯದ ವಿಷಯವಷ್ಟೆ, ನೀವು ಏನನ್ನಾದರೂ ಮಾಡಲೇಬೇಕೆಂದು ಮನಸ್ಸು ಮಾಡಿದಲ್ಲಿ ಅದನ್ನು ಪ್ರಾಯಶಃ ಮಾಡಬಲ್ಲಿರಿ!

## ಹದಿನಾರೋ ಅರವತ್ತೋ?

ಇಂದು ಜನರು ಹಿಂದಿನವರಿಗಿಂತ ದೀರ್ಘಕಾಲ ಬದುಕುತ್ತಾರೆ ಮತ್ತು ಹೊಸ ವಿಚಾರಗಳನ್ನು ಅನುಷ್ಠಾನಕ್ಕೆ ತರಲು ಮತ್ತು ಹೊಸ ವಿಧಾನಗಳನ್ನು ಕಲಿಯಲು ವೃದ್ಧರಿಗೆ ಇತರರಿಗಿಂತಲೂ ಹೆಚ್ಚಿನ ಬಿಡುವಿನ ಸಮಯವಿರುತ್ತದೆ. ಆದುದರಿಂದ ಅವರು ಕೇಳಲಿಚ್ಚಿಸದ ಸಂಗತಿಯೆಂದರೆ ತಾವು ಕಲಿಕೆಯ ಹಂತವನ್ನು ದಾಟಿಬಿಟ್ಟಿದ್ದೇವೆ ಮತ್ತು ತಾವು ಹೊಸದಾಗಿ ಯಾವುದರಲ್ಲು ಪರಿಣಿತಿ ಪಡೆಯಲಾಗದಷ್ಟು ಮತಿಹೀನರು ಅಥವಾ ಇಂತಹ ಇನ್ನಾವುದೇ ಮೂರ್ಖ ವಿಚಾರ. ಬ್ರಿಟನ್ನಿನಲ್ಲಿ ಇಂದು ಹದಿನಾರರ ಪ್ರಾಯದವರಿಗಿಂತ ಅರವತ್ತು ತುಂಬಿದ ವಯಸ್ಸಿನವರ ಸಂಖ್ಯೆ ಹೆಚ್ಚಾಗಿದೆ ಮತ್ತು ಅನೇಕ ವಿಧಗಳಲ್ಲಿ ಈ ವಯಸ್ಸಾದವರದ್ದು ಗಣನೀಯವಾದ ತಾಕತ್ತೆಂಬ ಅರಿವು ಸಮಾಜಕ್ಕೆ ಕ್ರಮೇಣ ಉಂಟಾಗುತ್ತಿದೆ.

## ವಯಸ್ಸಾದಂತೆ...........

ಜನರು ಇಂದಿನವರಿಗಿಂತ ಅಧಿಕ ವರ್ಷಗಳು ಬದುಕುತ್ತಿದ್ದಂತಹ ಕಾಲವೊಂದಿತ್ತು. ನೋಹನ ಕಾಲದ ಜಲಪ್ರಳಯಕ್ಕಿಂತ ಹಿಂದೆ, ಚಾರಿತ್ರಿಕ ಪುರಾವೆಯಂತೆ ವಾತಾವರಣದ

ಸ್ಥಿತಿಗತಿಗಳು ಈಗಿಗಿಂತ ಭಿನ್ನವಾಗಿದ್ದಾಗ, ಜನರು ಹಲವು ನೂರು ವರ್ಷಗಳ ಕಾಲ ಬದುಕುತ್ತಿದ್ದರು. ಆದರೆ ಪ್ರಳಯದ ನಂತರ ಮನುಷ್ಯನ ಆಯಸ್ಸು ಕಡಿಮೆ ಮಾಡಲ್ಪಟ್ಟು ಸರಾಸರಿ 120 ವರ್ಷಗಳ ಮಿತಿಗೆ ಒಳಪಡಿಸಲಾಗುವುದೆಂದು ದೇವರು ನಿರ್ದೇಶಿಸಿದನು (ನೋಡಿ–ಆದಿಕಾಂಡ 6:3).

ಆದರಿಂದ ಉದಾಹರಣೆಯಾಗಿ ನಾವು ಈ ಕೆಳಗಿನ ಸಜ್ಜನರ ಜೀವಿತವನ್ನು ನೋಡಬಹುದು:

* ಅಬ್ರಹಾಮನು 175 ವರ್ಷಗಳ ದೀರ್ಘಾಯುಷ್ಯವನ್ನು ಪಡೆದನು(ಆದಿಕಾಂಡ25:7) ಮತ್ತು ಕೊನೆಯತನಕ ಚಟುವಟಿಕೆಯಿಂದ ಇದ್ದನು.
* ಇಸಾಕನು 180 ವರ್ಷಗಳ ಕಾಲ ಬದುಕಿದ್ದು ಸತ್ತನು(ಆದಿಕಾಂಡ 35:28).
* ಯಾಕೋಬನು 147 ವರ್ಷಗಳ ಕಾಲವೂ,
* ಯೋಸೇಫನು 110 ವರ್ಷಗಳ ಕಾಲ ಮತ್ತು
* ಮೋಶೆಯು 120 ವರ್ಷಗಳು ಜೀವಿಸಿದರು.

ಈ ಎಲ್ಲಾ ಸಜ್ಜನರು ಮರಣದ ಪರ್ಯಂತ ವಿಶ್ವಾಸದಲ್ಲಿ ಸಕ್ರಿಯರಾಗಿ ಜೀವಿಸಿದರು. ಯಾಕೋಬನು ತನ್ನ ಮಕ್ಕಳು ಮತ್ತು ಅವರ ಸಂತತಿಯ ಮೇಲೆ ಪ್ರವಾದನಾಭರಿತ ಆಶೀರ್ವಾದವನ್ನು ತಿಳಿಸಬಲ್ಲವವದನು. ಯೋಸೇಫನು ತನ್ನ ಎಲಬುಗಳ ವಿಷಯದಲ್ಲಿ ಆಜ್ಞೆಯನ್ನಿತ್ತನು(ಅವನು ತನ್ನ ಎಲುಬುಗಳನ್ನು ಐಗುಪ್ತ ದೇಶದಲ್ಲಲ್ಲ, ಇಸ್ರಾಯೇಲಿನ ಹೆಬ್ರೋನಿನಲ್ಲಿ ಸಮಾಧಿ ಮಾಡಬೇಕೆಂದು ಇಚ್ಛೆಸಿದನು) ಮತ್ತು ಮೋಶೆಯು ಧರ್ಮೋಪದೇಶ ಕಾಂಡವೆಂದು ಹೆಸರಾದ ದೀರ್ಘ ವಿದಾಯ ಸೂಚಕ ಉಪನ್ಯಾಸಗಳ ಸರಣಿಯನ್ನೇ ಇತ್ತನು.

## ಸೀಮಿತ ಸಮಯ

ನಮ್ಮ ಆಯಸ್ಸಿನ ಕಾಲವು ಈಗಿರುವ ಮಟ್ಟಕ್ಕೆ ಕಡಿತಗೊಳಿಸಲ್ಪಡುತ್ತದೆ, ಎಂದು ದೇವರು ಮೋಶೆಗೆ ತಿಳಿಸಿದ್ದನು. ದೇವರೇಕೆ ಈ ರೀತಿ ಮನುಷ್ಯನ ಆಯುಸ್ಸನ್ನು ಮಿತಿಗೊಳಿಸಿದೆ ಎಂಬುದನ್ನು ನೋಡುವಾಗ, ಬಹುಶಃ ಮೋಶೆಯ ಸಂಗಡ ಹಿಂದಿರುಗಿದ ಯೆಹೂದ್ಯರು ತಮಗೆ ಸಿಕ್ಕಿದ ಅವಕಾಶಗಳನ್ನು ವ್ಯರ್ಥವಾಗಿ ಹೋಗಗೊಡುತ್ತಾ, ದೇವರ ಅಂಕೆಯಿಲ್ಲದೆ, ಬೇಜವಾಬ್ದಾರಿ ಭರಿತರಾಗಿ ವರ್ತಿಸುತ್ತಿದ್ದದರಿಂದ ಇರಬಹುದು. ಕಾರಣವೇನೇ ಇರಲಿ ದೇವರ ಶಕ್ತಿಯ ಪ್ರಭಾವದಿಂದ ರಚಿಸಿದ ಪ್ರಾರ್ಥನೆಯಲ್ಲಿ ಮೋಶೆಯು ಹೀಗೆ ಪ್ರಾರ್ಥಿಸಿದ್ದಾನೆ–''ನಿನ್ನ ರೋಷದಿಂದ ನಮ್ಮ ಕಾಲವೆಲ್ಲಾ ಸಂದುಹೋಯಿತು; ನಮ್ಮ ವರುಷಗಳು ನಿಟ್ಟುಸಿರಿನಂತೆ ತೀರಿಹೋದವು; ನಮ್ಮ ಆಯುಷ್ಯ ಕಾಲವು ಎಪ್ಪತ್ತು ವರುಷ; ಬಲ ಹೆಚ್ಚಿದ್ದರೆ ಎಂಬತ್ತು, ಕಷ್ಟ ಸಂಕಟಗಳೇ ಅದರ ಆಡಂಬರ, ಅದು ಬೇಗನೆ ಗತಿಸಿಹೋಗುತ್ತದೆ; ನಾವು ಹಾರಿ ಹೋಗುತ್ತೇವೆ'' (ಕೀರ್ತನೆಗಳು 90:9–19).

ಸೀನಾಯಿ ಅರಣ್ಯದಲ್ಲಿ ಅಲೆದಾಡುತ್ತಾ ಕಳೆದ 38 ವರುಷಗಳಲ್ಲಿ ಗಾಳಿಪಟ ಹಾರಿಸುವುದು ಜನರಿಗೆ ಕಾಲಕಳೆಯುವ ಒಂದು ಕಾರಣವಾಗಿರಬಹುದು, ಮತ್ತು ಮೋಶೆಯು ಬದುಕಿನ ಅಂತ್ಯವನ್ನು ಸೂಚಿಸಲು ಅದೇ ಉಪಮೆಯನ್ನು(ಹೋಲಿಕೆ) ಕೊಟ್ಟಿದ್ದಾನೆ. ನಮ್ಮ ಭೌತಿಕ ಅಸ್ಥಿತ್ವದ ದಾರವನ್ನು ಮರಣವು ತುಂಡು ಮಾಡುತ್ತದೆ ಮತ್ತು ನಾವು ಸೂತ್ರಕಿತ್ತ



ಪಟದಂತೆ ಪ್ರಜ್ಞೆ ಮತ್ತು ಜ್ಞಾನಶೂನ್ಯರಾಗಿ ಸಂವೇದನೆಯಿಲ್ಲದೆ ಹಾರಿಹೋಗುತ್ತೇವೆ. ಮೋಶೆ ವಿವರಿಸಿದಂತೆ ಇದು ನಡೆಯುವುದು ನೂರಾರು ವರ್ಷಗಳ ನಂತರವಲ್ಲ; 120 ವರ್ಷಗಳ ನಂತರವೂ ಅಲ್ಲ; ಕೇವಲ 70–80 ವರ್ಷಗಳಲ್ಲಿ. ಇದೇ ನಮ್ಮ ಇಂದಿನ ಪರಿಸ್ಥಿತಿ.

## ದೇವರನ್ನು ಹುಡುಕಿ

ಅನೇಕ ತಲೆಮಾರುಗಳ ನಂತರ ಗ್ರೀಸ್ ದೇಶದ ಮುಖ್ಯಭೂಭಾಗದಲ್ಲಿನ ಅಥೇನೆ (ಅಥೆನ್ಸ್) ಪಟ್ಟಣದಲ್ಲಿ , ಅಲ್ಲಿನ ತತ್ವಜ್ಞಾನಿಗಳಿಗೆ ''ದೇವರು ನಮ್ಮನ್ನು ಮನುಷ್ಯರನ್ನಾಗಿ ಉಂಟು ಮಾಡಿರುವುದು ದೇವರನ್ನು ಅರಸುವುದಕ್ಕೆ(ಹುಡುಕುವುದಕ್ಕೆ) ಮತ್ತು ಆತನ ವರದಾನವಾದ ನಿತ್ಯಜೀವವನ್ನು ಅರಿತುಕೊಳ್ಳುವುದಕ್ಕೆ'' ಎಂದು ತಿಳಿಸಿ ಹೇಳಿದವನು ಅಪೋಸ್ತಲನಾದ ಪೌಲನಾಗಿದ್ದಾನೆ.



''ಆತನು ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು ಹುಟ್ಟಿಸಿ, ಅವರವರು ಇರತಕ್ಕ ಕಾಲಗಳನ್ನೂ, ಅವರವರ ನಿವಾಸಗಳ ಮೇರೆಗಳನ್ನು ನಿಷ್ಕರ್ಷಿಸಿ, ಭೂಮಂಡಲದಲ್ಲೆಲ್ಲಾ ವಾಸಮಾಡಿಸಿ ಒಂದುವೇಳೆ ಅವರು ತಡವಾಗಿ ಕಂಡು ಕೊಂಡಾರೇನೋ ಎಂದು ತನ್ನನ್ನು ಹುಡುಕುವವರನ್ನಾಗಿ ಮಾಡಿದನು'' (ಅಪೋಸ್ತಲರ ಕೃತ್ಯಗಳು 17:26–27).

ತಮ್ಮ ಸಂಸ್ಕೃತಿಯನ್ನು ಅರಿಯದವನೂ, ಯೆಹೂದ್ಯನೂ ಆಗಿದ್ದು ತಮ್ಮ ವಿಶ್ವವಿದ್ಯಾಲಯಗಳಲ್ಲಿ ಪಾಠ ಹೇಳಬಲ್ಲಂಥ ವಿಧ್ವಂಸನಲ್ಲದ ಪೌಲನಿಗೆ ಅಂದು ಸಿಕ್ಕಿದ ಪುರಸ್ಕಾರ ಏನು ಎನ್ನುತ್ತೀರೋ? ದೊಡ್ಡಸ್ಥಿಕೆಯಿಂದ –''ನೀನು ಈ ವಿಷಯದಲ್ಲಿ ಹೇಳಲಿಕ್ಕಿರುವುದನ್ನು ನಾವು ಇನ್ನೊಂದು ಸಾರಿ ಕೇಳುತ್ತೇವೆ'' ಎಂದು ಹೇಳಿ ಪೌಲನನ್ನು ಅಲ್ಲಿಂದ ಕಳುಹಿಸಿ ಬಿಟ್ಟರು.

ಈ ವೃತ್ತಾಂತವು ಹೀಗೆ ಮುಂದುವರೆಯುತ್ತದೆ–''......ಹೀಗಿರಲು ಪೌಲನು ಅವರ ಮಧ್ಯದಿಂದ ಹೊರಟುಹೋದನು. ಕೆಲವರು ಅವನನ್ನು ಸೇರಿಕೊಂಡು ನಂಬಿದರು. ನಂಬಿದವರಲ್ಲಿ ಅರಿಯೋಪಾಗದ ಸಭೆಯವನಾಗಿದ್ದ ದಿಯೋನಿಸ್ಸನೂ, ದಾಮರಿಯೆಂಬಾಕೆಯೂ ಇನ್ನೂ ಕೆಲವರು ಇದ್ದರು'' (ಅ.ಕೃ. 17:33–34).

ದೇವರಿಗೆ ಬೇಕಾಗಿರುವುದು ಇಂಥವರೇ– ಪುರುಷರು, ಸ್ತ್ರೀಯರು, ಸಾಮಾಜಿಕ ಅಂತಸ್ತು, ಲಿಂಗಭೇದ, ಶಿಕ್ಷಣ ಎಲ್ಲಕ್ಕಿಂತ ಭಿನ್ನವಾಗಿ ದೇವರಿತ್ತ ವಾಗ್ದಾನವೊಂದನ್ನೇ ನಂಬಿ ಬರುವವರು. ಪ್ರತಿಯೊಂದು ತಲೆಮಾರಿನಲ್ಲಿಯೂ ಇಂಥವರ ಸಂಖ್ಯೆ ಕಡಿಮೆಯೇ ಇರುತ್ತದೆ. ಸತ್ಯವೇದದ ಕಾಲದ ಆರಂಭದಲ್ಲಿಯೂ ದೇವರು ವಿಶ್ವಾಸಿ ಜನಶೇಷದ ಮಧ್ಯೆ ಸಕ್ರಿಯವಾಗಿದ್ದಾಗ ಇದೇ ಪರಿಸ್ಥಿತಿ ಮತ್ತು ಈಗಲೂ ಇದೆ. ದೇವರು ಯಾವಾಗಲೂ ಸಂಖ್ಯೆಯ ಬಗೆಗಲ್ಲ,

ಕಾರ್ಯಗಳ ಬಗ್ಗೆ ಚಿಂತಿಸುತ್ತಾನೆ. ದೇವರನ್ನು ಹುಡುಕಲು ನಾವೆಷ್ಟು ವಯಸ್ಸಿನವರಾಗಿದ್ದೇವೆ ಎಂಬುದಲ್ಲ, ನಾವೆಷ್ಟು ಉತ್ಸುಕರಾಗಿದ್ದೇವೆ ಎನ್ನುವುದೇ ಮುಖ್ಯಾವಾಗಿದೆ.


## ಈಗಲೂ ಕಾಲ ಮಿಂಚಿಲ್ಲ

ದಿಯೋನಿಸ್ಯನೂ, ದಾಮರಿಯೂ ಮತ್ತಿತರರೂ ಬಹುಶಃ ಪ್ರಾಯಸಂದವರಾಗಿದ್ದಿರ ಬಹುದು ನಮಗೆ ಗೊತ್ತಿಲ್ಲ. ಸರ್ವ ವಿಧಿತವಾದ ವಿಷಯವೆಂದರೆ, ಅಂದಿನಂತೆ ಇಂದಿನ ಪ್ರಪಂಚದಲ್ಲಿಯೂ ವಯಸ್ಸಾಗುತ್ತಿದ್ದ ಹಾಗೇ ಮರಣ, ಮರಣಾನಂತರ ಮುಂದೇನು? ಎಂಬ ವಿಷಯಗಳ ಬಗ್ಗೆ ಮುಖಾಮುಖಿಯಾದಗಲೇ ಜನರು ಅವುಗಳ ಬಗ್ಗೆ ಯೋಚಿಸಲು ಆರಂಭಿಸುತ್ತಾರೆ. ಪ್ರತಿಯೊಬ್ಬನಿಗೂ ಮರಣಶಯ್ಯೆಯಲ್ಲಿ ಮಲಗಿ ಕೊನೇ ಗಳಿಗೆಯನ್ನು ಎದುರು ನೋಡಬೇಕಾದ ಅನುಭವ ತಪ್ಪಿದ್ದಲ್ಲ, ಮತ್ತು ನಮ್ಮಲ್ಲಿ ಪ್ರತಿಯೊಬ್ಬರೂ ಆ ಗಳಿಗೆಯಲ್ಲಿ ಇದಕ್ಕಿಂತ ಉತ್ತಮವಾದ ಬದುಕಿಗೆ ಪ್ರವೇಶಿಸುವ ಬಯಕೆ ಮತ್ತು ನಿರೀಕ್ಷೆಯನ್ನು ಹೊಂದಿರುತ್ತಾರೆ.

ಈ ನಿರೀಕ್ಷೆ ಸಫಲವಾಗಬೇಕಾದರೆ ನಾವು ಈಗಲೇ ನಮಗೊದಗಿದ ಅವಕಾಶವನ್ನು ಉಪಯೋಗಿಸಿಕೊಂಡು, ದೇವರ ಮುಂದೆ ನಮ್ಮ ಬದುಕನ್ನು ಸರಿಪಡಿಸಿಕೊಳ್ಳಬೇಕು, ದೇವರೊಂದಿಗೆ ಸಂಧಾನ ಮಾಡಿಕೊಂಡು ಯೇಸುಕ್ರಿಸ್ತನ ಹಿಂಬಾಲಕರಾಗಲು ಇಂದಿಗೂ ಕಾಲಮಿಂಚಿದೆ ಎನ್ನುವ ಆಗಿಲ್ಲ, ಆದರೆ ಎಷ್ಟುಬೇಗ ನಾವು ನಮ್ಮ ಶೋಧವನ್ನು ಆರಂಭಿಸುವ ಅಥವಾ ಮುಗಿಸುವ ಪ್ರಕ್ರಿಯೆಯಲ್ಲಿ ತೊಡಗುತ್ತೇವೋ ಅಷ್ಟು ಒಳ್ಳೆಯದು!

• • • • • • • • • • • •

# ಸುವಾರ್ತೆಯ ಸಂಪತ್ತು



ಆಗ ಯೇಸು ಅವನನ್ನು ನೋಡಿ– ''ಧನವಂತರು ದೇವರ ರಾಜ್ಯದಲ್ಲಿ ಸೇರುವುದು ಎಷ್ಟೋ ಕಷ್ಟ. ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಸೇರುವುದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗ್ಗುವುದು ಸುಲಭ ಅಂದನು'' (ಲೂಕ 18:24–25). ಮನುಷ್ಯನಿಗೆ ಅಸಾಧ್ಯವಾದ ಸಂಗತಿಗಳು ದೇವರಿಗೆ ಸಾಧ್ಯವೆಂದು ಉಪಮೆಯಾಗಿ ಹೇಳಲ್ಪಟ್ಟಿರುತ್ತದೆ. ಈ ಜೀವಿತದಲ್ಲಿ ಐಶ್ವರ್ಯವನ್ನು ಸ್ವಾಧೀನ ಮಾಡಿಕೊಳ್ಳುವುದಾದರೆ ಸುವಾರ್ತೆಯು ನಿಜವಾದ ಸಂಪತ್ತನ್ನು ಪಡೆಯುವುದು ಕಷ್ಟವೆಂದು ಯೇಸು ಭೋದಿಸಿದ್ದಾನೆ.



## ಭೌತಿಕ ಸಂಪತ್ತು ಅಥವಾ ಐಶ್ವರ್ಯ

ಸತ್ಯವೇದದಲ್ಲಿ ತೋರಿಬರುವಂತಹ ಅನೇಕ ಜನರು ಭೌತಿಕವಾಗಿ ಐಶ್ವರ್ಯವಂತರು ಆಗಿದ್ದರು. ಅವರು ನಿರೀಕ್ಷೆಯಿಲ್ಲದವರೆಂದು ಪರಿಗಣಿಸಿಲ್ಲ. ಅವರು ನಂಬಿಗಸ್ತರು ಮತ್ತು ದೇವರಿಗೆ ಮೆಚ್ಚಿಕೆಯಾದವರೆಂದು ವಿವರಿಸಲ್ಪಟ್ಟಿದೆ. ಉದಾಹರಣೆಯಾಗಿ–ಹಳೇ ಒಡಂಬಡಿಕೆಯಲ್ಲಿ ಅಬ್ರಹಾಮ ಮತ್ತು ದಾವೀದನು ಎಂದು ಬರೆಯಲ್ಪಟ್ಟಿರುತ್ತದೆ. ಮಾರ್ಕನು ಬರೆದ ಸುವಾರ್ತೆಯಲ್ಲಿ ಬರೆದಿರುವ ಹಾಗೆ ಇನ್ನೊಂದು ಹೆಚ್ಚಿನ ತುಣುಕಿನ ಸಮಾಚಾರ ಬರೆದಿರುತ್ತದೆ:

''ಮಕ್ಕಳೇ ಧನವಂತರು ದೇವರ ರಾಜ್ಯದಲ್ಲಿ ಸೇರುವುದು ಎಷ್ಟೋ ಕಷ್ಟ'' (ಮಾರ್ಕ10:24).

ಅದುವೇ ನಿಜಾಂಶ! ಧನವಂತರಾಗುವುದು ಅಪಾಯವಲ್ಲ, ಆದರೆ ಅವುಗಳಲ್ಲಿ (ಸಂಪತ್ತಿನಲ್ಲಿ) ನಂಬಿಕೆಯಿಡುವುದೇ ಅಪಾಯವಾಗಿದೆ. ಅಪೋಸ್ತಲನಾದ ಪೌಲನು ಬರೆದಿರುವಂತ ಮತ್ತು ನಮಗೆ ಗೊತ್ತಿರುವ ಹಾಗೆ ಪದೇಪದೇ ಸಂಭವಿಸುವ ವಚನ ಉಲ್ಲೇಖಿಸಲ್ಪಡುತ್ತದೆ:

''ಹಣದಾಶೆಯು ಸಕಲವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ಆದರಿಂದ ಕ್ರಿಸ್ತನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ'' (1ತಿಮೋಥೆ 6:10).

ಪೌಲನು ತಿಮೋಥೆಯನನ್ನು ಎಚ್ಚರಿಸುತ್ತಾನೆ–''ಐಶ್ವರ್ಯವಂತರಾಗಬೇಕೆಂದು ಮನಸ್ಸು ಮಾಡುವವರು ದುಷ್ಪ್ರೇರಣೆಯೆಂಬ ಉರ್ಲಿನಲ್ಲಿ ಸಿಕ್ಕಿಕೊಂಡು ಬುದ್ಧಿ ವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಶೆಗಳಲ್ಲಿ ಬೀಳುತ್ತಾರೆ'' (1ತಿಮೋಥೆ 6:9).

ಆತ್ಮೀಯ ಜೀವಿತಗಳನ್ನು ಲಕ್ಷ್ಯಕ್ಕೆ ತರುವುದಾದರೆ, ಹಣದಾಶೆಯು ಅಥವಾ ಐಶ್ವರ್ಯಗಳು ಜನರನ್ನು ಮಹಾಪ್ರಪಾತದತ್ತ ನಡೆಸುತ್ತವೆ. ಅಪೋಸ್ತಲನು ಅದನ್ನು ಇಂದು ನಿಜವಾಗಿ ಬರೆದಿದ್ದಾನೆ. ಅನೇಕ ಜನರು ಐಶ್ವರ್ಯರಾಗಲಿಕ್ಕೆ ಜೂಜಾಡುತ್ತಾರೆ, ಆಶೆ ಅನೇಕ ಆಶೆಗಳನ್ನು ಉಂಟುಮಾಡುವುದು ಮತ್ತು ಸ್ವಾರ್ಥತೆ ಅನೇಕ ಅಪರಾಧಗಳಿಗೆ ದಾರಿಮಾಡಿ ಕೊಡುತ್ತದೆ. ಇಂತಹ ಇತಿಹಾಸ ಅನೇಕ ಸಂತೋಷವಲ್ಲದ ವಿಚಾರಗಳ ಬೆಳವಣಿಗೆಗಳಿಂದ ತುಂಬಿರುತ್ತದೆ.

## ಅದು ನನ್ನದು !

ಹೊಸಒಡಂಬಡಿಕೆಯಲ್ಲಿ ಯೌವ್ವನಸ್ಥನು ಯೇಸುವಿನ ಹತ್ತಿರ ಬಂದು ನಿತ್ಯಜೀವವನ್ನು ಹೇಗೆ ಹೊಂದಬೇಕೆಂದು ಕೇಳಿದ ವಿಷಯ ಬರೆಯಲ್ಪಟ್ಟಿರುತ್ತದೆ. ಆದರೆ ಯಾವಾಗ ಯೇಸು ಸ್ವಾಮಿಯು ಆತನನ್ನು ಪರೀಕ್ಷೆಗೊಳಪಡಿಸಿದನೋ, ಆತನು ದುಃಖದಿಂದ ಹೊರಟು ಹೋದನು. ನಿತ್ಯಜೀವವನ್ನು ಪಡೆಯಬೇಕಾದರೆ ಏನು ಮಾಡಬೇಕು ಎಂದು ಆತನು ಯೇಸುವನ್ನು ಕೇಳಲಾಗಿ, ಅದನ್ನು ನೀನು ಪಡೆಯಬೇಕಾದರೆ ಬೆಲೆಯನ್ನು ತೆರಬೇಕೆಂದು ಯೇಸು ಆತನಿಗೆ ಹೇಳಿದನು:

''ಯೇಸು ಅವನಿಗೆ ನೀನು ಸಂಪೂರ್ಣನಾಗಬೇಕೆಂದಿದ್ದರೆ ಹೋಗಿ ನಿನ್ನ ಆಸ್ತಿಯನ್ನು ಮಾರಿ ಬಡವರಿಗೆ ಕೊಡು, ಪರಲೋಕದಲ್ಲಿ ನಿನಗೆ ಸಂಪತ್ತಿರುವುದು; ನೀನು ಬಂದು ನನ್ನನ್ನು

ಹಿಂಬಾಲಿಸು ಎಂದು ಹೇಳಿದನು. ಆ ಯೌವ್ವನಸ್ಥನು ಬಹಳ ಆಸ್ತಿಯುಳ್ಳವನಾಗಿದ್ದರಿಂದ ಈ ಮಾತನ್ನು ಕೇಳಿ ದುಃಖದಿಂದ ಹೊರಟುಹೋದನು'' (ಮತ್ತಾಯ 19:21–22).

ಆತನು ತನ್ನ ಯೌವ್ವನ ದಿನದಿಂದಲೂ ದೇವರ ಆಜ್ಞೆಯನ್ನು ಕೈಗೊಂಡಿದ್ದಾಗ್ಯೂ, ತನ್ನಲ್ಲಿರುವ ಬಹಳ ಆಸ್ತಿಯನ್ನು ಕಳಕೊಳ್ಳಲು ಇಷ್ಟವಿರಲಿಲ್ಲ. ಆತನು ಅವುಗಳಲ್ಲಿ ನಂಬಿಕೆಯನ್ನು ಇಟ್ಟಿದ್ದನೆಂದು ತೋರಿಬರುತ್ತದೆ. ದೇವರ ಆಜ್ಞೆ ಗೊತ್ತಿದ್ದದರಿಂದ ಆತನು ದೇವರಲ್ಲಿ ನಂಬಿಕೆ ಇಡಬಹುದಾಗಿತ್ತು. ಆದಾಮ ಮತ್ತು ಹವ್ವಳು ಹೇಗೆ ಏದೆನ್ ತೋಟದಲ್ಲಿ ನಂಬಿಕೆಗೆ ಬಿದ್ದುಹೋದರೋ, ಅದೇರೀತಿ ಈ ಯೌವ್ವನಸ್ಥನು ಅಪನಂಬಿಕೆಯುಳ್ಳವನಾಗಿದ್ದನು. ಆದಾಮ ಮತ್ತು ಹವ್ವಳು ತಮಗೆ ಕೊಟ್ಟಿರುವದರಲ್ಲಿ ತೃಪ್ತರಾಗಿರದೆ ಆತಿಆಶೆಪಟ್ಟು ಪಾಪ ಮಾಡಿದರು.

## ಪುನಃ ಮಣ್ಣಿಗೆ ಸೇರು

ನಾವು ಐಶ್ವರ್ಯದಲ್ಲಿರಲಿ ಅಥವಾ ಬಡತನದಲ್ಲಿರಲಿ, ದೊಡ್ಡಮನೆ ಇರಲಿ ಅಥವಾ ಗುಡಿಸಲಾಗಿರಲಿ, ನಮಗಿರುವ ಹವ್ಯಾಸ ಇದು ನನ್ನದು, ಅದು ನನ್ನದು ಎಂದು ಹೇಳುತ್ತೇವೆ. ಆದರೆ ಇವುಗಳ ಮಧ್ಯದಲ್ಲಿ ನಮ್ಮ ಅಂತ್ಯ ಏನಾಗಿದೆ ಮತ್ತು ಎಲ್ಲಿಗೆ ಹೋಗುತ್ತಿದ್ದೇವೆಂದು ಮರೆಯಬಾರದು. ನಮ್ಮ ಸ್ಥಿತಿಯ ಕುರಿತಾಗಿ ಸುವಾರ್ತೆ ಈ ರೀತಿಯಾಗಿ ಸತ್ಯವನ್ನು ಹೇಳುತ್ತದೆ.




''ಸಂತುಷ್ಟ ಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ, ನಾವು ಲೋಕದೊಳಗೆ ಏನೂ ತಕ್ಕೊಂಡು ಬರಲಿಲ್ಲವಷ್ಟೆ; ಅದರೊಳಗಿಂದ ಏನೂ ತಕ್ಕೊಂಡು ಹೋಗಲಾರೆವು. ನಮಗೆ ಅನ್ನ ವಸ್ತ್ರಗಳಿದ್ದರೆ ಸಾಕು'' (1ತಿಮೋಥೆ 6:6–8).

ಇದರ ಅರ್ಥ ನಾವು ನಿಜವಾಗಿಯೂ ಬಡವರು, ಯಾಕಂದರೆ ಮುಸುಕಿನಲ್ಲಿ ಯಾವುದೇ ಜೇಬುಗಳಿಲ್ಲ. ನಾವು ಹೋಗುವಾಗ ಏನನ್ನು ತೆಗೆದುಕೊಂಡು ಹೋಗುವುದಿಲ್ಲ, ಯಾಕಂದರೆ ನಮಗಿರುವುದೆಲ್ಲವೂ ಮಣ್ಣಿಗೆ ಸೇರುತ್ತದೆ. ಮರಣವು ನಿಜವಾಗಿಯೂ ಏನಾಗಿದೆ ಎಂದು ದೇವರು ಏದೆನ್ ತೋಟದಲ್ಲಿ ಹೇಳಿದ್ದಾನೆ.

''ನೀನು ತಿರುಗಿ ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು. ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ, ನೀನು ಮಣ್ಣೇ ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದಿ'' (ಆದಿಕಾಂಡ 3:19).

ನಾವು ಆಹಾರವನ್ನು ತಿನ್ನಬೇಕಾದರೆ ನಾವು ಕೆಲಸ ಮಾಡಲೇಬೇಕು, ಆದರೆ ಯಾವಾಗ ನಮ್ಮ ಕೆಲಸ ಮುಗಿಯುತ್ತದೋ, ನಮ್ಮ ಪರವಾಗಿ ದೇವರ ಕ್ರಿಯೆ ಇಲ್ಲದೆ ಹೋದರೆ ನಾವು ಬದುಕಲಾಗುವುದಿಲ್ಲ. ಆದರೆ ದೇವರು ಮಾತ್ರವೇ ಆ ಪ್ರಕ್ರಿಯೆಯನ್ನು ತಿರುಗಿಸಿ, ತನ್ನ ಶಕ್ತಿಯಿಂದ ನಮ್ಮನ್ನು ಸತ್ತವರೊಳಗಿಂದ ಎಬ್ಬಿಸಿ ನಮ್ಮನ್ನು ಸ್ವಪ್ರಜೆಯಂತೆ ನಡೆಸಬಲ್ಲವನಾಗಿದ್ದಾನೆ. ನಮ್ಮನ್ನು ಪುನರುತ್ಥಾನದಿಂದ ತಿರುಗಿ ಬದುಕಿಸುವವನಾಗಿರುವನು, ಆದರೆ ನಾವು ಒಳ್ಳೆಯವರಾಗಿ ನಡೆದರೆ ಮಾತ್ರ ಈ ಕಾರ್ಯ ಸಾಧ್ಯವಾಗುತ್ತದೆ.



## ದೇವರ ಅವಲಂಬನೆ

ನಮಗೆ ಅಗತ್ಯವಿರುವ ಎಲ್ಲವುಗಳ ನಿಮಿತ್ತ ನಾವು ದೇವರ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದ್ದರೆ, ಆತನು ನಮಗೆ ಜೀವವನ್ನು ದಯಪಾಲಿಸಿ ಎಲ್ಲವನ್ನು ಕೊಡುತ್ತಾನೆ. ಆದರೆ ಈ ದಿವಸಗಳಲ್ಲಿ ಅನೇಕರು ಆತನಲ್ಲಿ ನಂಬಿಕೆಯಿಡುವುದಿಲ್ಲ. ತಮ್ಮ ಜೀವಿತದ ಮುಂದಿನ ವಿಷಯ ತಮಗೆ ಚೆನ್ನಾಗಿ ಗೊತ್ತಿದೆ ಎಂದು ತಿಳಿದುಕೊಂಡಿದ್ದಾರೆ. ತಮ್ಮ ಹಕ್ಕುಗಳ ಕುರಿತಾಗಿ ತುಂಬಾ ಮಾತಾಡುತ್ತಾರೆ. ಆದರೆ ದೇವರಿಗೆ ತಮ್ಮ ಜವಾಬ್ದಾರಿಗಳ ಕುರಿತು ಮಾತಾಡುವುದಿಲ್ಲ. ಮರಣ ಎಲ್ಲರಿಗೂ ಬರುತ್ತದೆ, ಯಾರೂ ತಪ್ಪಿಸಿಕೊಳ್ಳಲಾರರು. ಒಂದು ವೇಳೆ ನಾವು ಈ ಜೀವಿತದಲ್ಲಿ ದೇವರ ಬಗ್ಗೆ ಆಲೋಚನೆ ಮಾಡದೆ ಹೋದರೆ, ಯೇಸುಕ್ರಿಸ್ತ ಸತ್ತವರನ್ನು ತಿರುಗಿ ಎಬ್ಬಿಸುವಾಗ ಮುಂದಿನ ಜೀವಿತದಲ್ಲಿ ಯಾಕೆ ನಮ್ಮಬಗ್ಗೆ ಆತನು ಆಲೋಚನೆ ಮಾಡಬೇಕು?

ಶಾಶ್ವತವಾಗಿರುವಂತ ನಿಜವಾದ ಸಂಪತ್ತನ್ನು ಪಡೆದುಕೊಳ್ಳಬೇಕಾದರೆ ನಾವು ಏನನ್ನು ಮಾಡಬೇಕು? ಮೊದಲನೆಯದಾಗಿ, ತನ್ನ ವಾಕ್ಯದಿಂದ ಆತನು ಹೇಳುವುದನ್ನು ಕೇಳೋಣ. ನೀವು ಕೇಳಲು ಸಿದ್ಧರಾಗಿದ್ದೀರಾ? ಸತ್ಯವೇದದಿಂದ ಉದಾಹರಣೆಯಾಗಿ ದೇವರು ಮಾತನಾಡುವುದು ಮತ್ತುಉತ್ತೇಜನಪಡಿಸುವುದು ಕುರಿತಾಗಿ ನಮ್ಮ ಗಮನಕ್ಕೆ ಕೊಟ್ಟಿರುತ್ತದೆ.

''ಸಕಲ ದೇಶಗಳವರೇ, ಕೇಳಿರಿ; ಭೂಲೋಕದ ನಿವಾಸಿಗಳಿರಾ, ಕಿವಿಗೊಡಿರಿ, ಜನಗಳೇ ಜನಾಧಿಪತಿಗಳೇ, ಬಡವರೇ ಬಲ್ಲಿದರೇ ನೀವೆಲ್ಲರೂ ಒಂದಾಗಿ ಒಂದು ಆಲೈಸಿರಿ. ನನ್ನ ಬಾಯಿ ಸುಜ್ಞಾನವನ್ನು ಭೋದಿಸುವುದು; ನನ್ನ ಹೃದಯವು ವಿವೇಕವನ್ನು ಫಲಿಸುವುದು'' (ಕೀರ್ತನೆಗಳು 49:1–3).

## ದೇವರಿಂದ ವರದಾನಗಳು

ದೇವರಿಂದ ಕೊಡಲ್ಪಟ್ಟ ಜೀವಿತವೆಂಬ ವರದಾನವನ್ನು ನಾವು ಸರಿಯಾಗಿ ಉಪಯೋಗಿಸಬೇಕು. ನಾವು ಇದನ್ನು ಆನಂದಿಸಬೇಕು. ಆದ್ದರಿಂದ ಆತನು ಕಾಣಿಕೆಯಾಗಿ ಕೊಡುವ ನಿತ್ಯಜೀವವನ್ನು ತಿಳಿದುಕೊಳ್ಳಲು, ನಾವು ದೇವರು ಯಾರು ಮತ್ತು ಆತನ ಉದ್ದೇಶ ಏನು ಎಂದು ತಿಳಿಯಲು ಇದು ಒಂದು ಪ್ರಮುಖವಾದ ಅವಕಾಶವಾಗಿದೆ. ಸುಂದರವಾದ ಜಗತ್ತನ್ನು ಸೃಷ್ಟಿಸಿದ ದೇವರ ಅದ್ಭುತವಾದ ಕ್ರಿಯೆಯನ್ನು ತಿಳಿದುಕೊಳ್ಳಲು ಜ್ಞಾನಿಯಾದ ಸೊಲೋಮೋನನು ಈ ರೀತಿಯಾಗಿ ಬರೆಯುತ್ತಾನೆ:

''ಇದಲ್ಲದೆ ಪ್ರತಿಯೊಬ್ಬನು ಅನ್ನಪಾನಗಳನ್ನು ತೆಗೆದುಕೊಂಡು ತನ್ನ ನಾನಾ ಪ್ರಯಾಸಗಳಲ್ಲಿಯೂ ಸುಖವನ್ನು ಅನುಭವಿಸುವುದು ದೇವರ ಅನುಗ್ರಹವೇ ಎಂದು ನನಗೆ ಗೊತ್ತಿದೆ'' (ಪ್ರಸಂಗಿ 3:13).

ದೇವರ ಸೃಷ್ಟಿಯಲ್ಲಿ ಎಂತಹ ಅದ್ಭುತವಾದ ಸಂಗತಿಗಳುಂಟು–ಬಾನಾಡಿಗಳ ಹಾಡುಗಳು, ಸೂರ್ಯಾಸ್ತದ ಅದ್ಭುತಗಳು, ಹೂವುಗಳಲ್ಲಿರುವ ಬಣ್ಣಗಳು ಇತ್ಯಾದಿ ಎಂದು ಅನೇಕ ಸಂಗತಿಗಳ ಕುರಿತು ಹೆಸರಿಸಬಹುದು. ಆದರೆ ನಾವು ಕೆಲವೊಂದುಗಳನ್ನು ಮಾತ್ರ ಹೆಸರಿಸಬಹುದು. ಉಳಿದೆಲ್ಲವುಗಳು ನಮ್ಮ ಕಣ್ಣಿಗೆ ಕಾಣದಿದ್ದರೂ, ಎಲ್ಲವೂ ತಿಳಿಯದಿದ್ದರೂ ಅವುಗಳೆಲ್ಲವೂ ದೇವರು ನಮಗಾಗಿ ವ್ಯಕ್ತಪಡಿಸಿದ ಸಂಪತ್ತಿನ ಕಾಣಿಕೆಗಳು. ನಾವು ಅನೇಕ

ಬಾರಿ ಪರಿಗಣಿಸುವ ಅಪೋಸ್ತಲನಾದ ಪೌಲನು ಈ ರೀತಿಯಾಗಿ ಹೇಳಿದ್ದಾನೆ–''ಇಹಲೋಕದ ವಿಷಯದಲ್ಲಿ ಐಶ್ವರ್ಯವುಳ್ಳವರು ಅಹಂಕಾರಿಗಳಾಗಿರದೆ ಅಸ್ಥಿರವಾದ ಐಶ್ವರ್ಯದ ಮೇಲೆ ನಿರೀಕ್ಷೆಯನ್ನಿಡದೆ ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನೂ ಹೇರಳವಾಗಿ ದಯಪಾಲಿಸುವ ದೇವರ ಮೇಲೆ ನಿರೀಕ್ಷೆಯನ್ನಿಡಬೇಕು'' (1ತಿಮೋಥೆ 6:17).

ನಾವು ಗಮನ ಕೊಡದೆ ಮತ್ತು ಸ್ವಾರ್ಥಪರರಾಗಿ ಜೀವಿಸಲೆಂದು ಈ ಸಂಗತಿಗಳು ನಮಗೆ ಕೊಡಲ್ಪಟ್ಟಿರುವುದಿಲ್ಲ. ಯೇಸುಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿ ತಮ್ಮನ್ನು ತಾವೇ ದೇವರಿಗೆ ಸಮರ್ಪಿಸಿಕೊಂಡಿರುವಂತ ಜನರಿಗೆ ಪೌಲನು ಬರೆಯುವವನಾಗಿದ್ದಾನೆ. ನೀವು ನೋಡುವ ಹಾಗೆ, ಅವರೆಲ್ಲರೂ ಯೇಸುಕ್ರಿಸ್ತನ ಅನುಯಾಯಿಗಳು. ಆದ್ದರಿಂದ ಪೌಲನು ಅವರಿಗೆ ಅವರ ಜವಾಬ್ದಾರಿಗಳನ್ನು ಮನವರಿಕೆ ಮಾಡುವಾಗ ಈ ರೀತಿಯಾಗಿ ಹೇಳುತ್ತಾ ಹೋಗುತ್ತಾನೆ:–

''ಅವರು ಒಳ್ಳೇದನ್ನು ಮಾಡುವವರೂ, ಸತ್ಕಾರ್ಯಗಳಲ್ಲಿ ಐಶ್ವರ್ಯವಂತರೂ, ದಾನಧರ್ಮಗಳನ್ನು ಮಾಡುವವರೂ ಪರೋಪಕಾರ ಮಾಡುವವರೂ ಆಗಿದ್ದು ಮುಂದಿನ ಕಾಲಕ್ಕೆ ಒಳ್ಳೇ ಅಸ್ತಿವಾರವಾಗುವಂಥವುಗಳನ್ನು ತಮಗೆ ಕೂಡಿಸಿಟ್ಟುಕೊಳ್ಳಬೇಕಂತಲೂ ಅವರಿಗೆ ಅಜ್ಞಾಪಿಸು'' (1ತಿಮೋಥೆ 6:18–19).

ಸ್ಥಿರವಾದ ಸರ್ವಶಕ್ತ ದೇವರ ಅಸ್ಥಿತ್ವ ಮತ್ತು ಅಸ್ಥಿರವಾದ ಐಶ್ವರ್ಯದ ನಡುವೆ ಎಂತಹ ವ್ಯತ್ಯಾಸ ಮತ್ತು ನಂಬಿಗಸ್ತ ಹಾಗೂ ವಿಧೇಯರಾದಂತವರಿಗೆ ಎಂತಹ ವಾಗ್ದಾನ! ಯೌವ್ವನಸ್ತನು ಆಶಿಸಿದಂತ ನಿತ್ಯಜೀವವನ್ನು ಈ ನಂಬಿಗಸ್ತ ವಿಶ್ವಾಸಿಗಳಿಗೆ ವಾಗ್ದಾನ ಕೊಡಲ್ಪಟ್ಟಿರುತ್ತದೆ.

## ನಿತ್ಯಜೀವ

**''ನಿತ್ಯಜೀವ''**(ಅಥವಾ ಅಮರತ್ವ) ಅನ್ನುವಂತದ್ದು ನಮ್ಮ ಹಕ್ಕಲ್ಲ ಎಂದು ನಾವು ಮೊದಲನೆಯದಾಗಿ ಅರ್ಥಮಾಡಿಕೊಳ್ಳಬೇಕು. ನಾವು ಮರಣಾಧೀನವಾಗಲು ಜನಿಸಿದ್ದೇವೆ ಮತ್ತು ಎಲ್ಲಿಯವರೆಗೆ ನಿತ್ಯಜೀವದ ಬಾಗ್ಯಕ್ಕೆ ದೂರವಾಗಿರುತ್ತೇವೋ ಅಲ್ಲಿಯವರೆಗೂ ನಾವು ನಿರ್ಗತಿಕರಾಗಿದ್ದೇವೆ. ನಾವು ಅಮರತ್ವವುಳ್ಳ ಪ್ರಾಣವನ್ನು ಹೊಂದಿಕೊಂಡೇ ಜನಿಸಿದ್ದೇವೆಂದು ಸತ್ಯವೇದವು ಒಂದು ನಿಮಿಷವೂ ನಮ್ಮನ್ನು ಮನರಂಜಿಸುವುದಿಲ್ಲ. ಮನುಷ್ಯನು ದೇವರ ಸಜೀವ ಪವಿತ್ರಶಕ್ತಿಯಿಂದ ನಿರ್ಮಿಸಲ್ಪಟ್ಟನು ಎಂದು ಸತ್ಯವೇದವು ತಿಳಿಸುತ್ತದೆ, ಹೊರತು ಅಂತ್ಯವಾಗುವುದಕ್ಕಲ್ಲ. ನಾವು ಅತಿಬೇಗನೆಯೋ ಅಥವಾ ನಂತರವೋ ಮರಣದ ಜೀವಿಗಳಾಗುತ್ತೇವೆ. ನಾವು ಪಾಪದ ನಿಮಿತ್ಯ ಸಾಯುತ್ತೇವೆ. ''ಪಾಪವು ಕೊಡುವ ಸಂಬಳ ಮರಣ'' (ರೋಮಾಪುರದವರಿಗೆ 6:23).

ಆದರೆ ಒಂದು ವೇಳೆ ಈ ರೀತಿಯಾಗಿದ್ದರೆ ''ನಿತ್ಯಜೀವ''ದ ಕುರಿತು ಯಾಕೆ ಮಾತಾಡುತ್ತೀರಿ? ಎಂದು ಕೇಳಬಹುದು. ''ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿರುವ **ನಿತ್ಯಜೀವ**'' (ರೋಮಾಪುರದವರಿಗೆ 6:23).

ಸುವಾರ್ತೆಯ ಸಂದೇಶದ ಮಧ್ಯದಲ್ಲಿ **''ದೇವರ ಉಚಿತಾರ್ಥ ವರವು''** ಕಂಡು



ಬರುತ್ತದೆ. ಇದು ದೇವರ ವರ, ನಾವು ಇದನ್ನು ಎಂದೂ ಸಂಪಾದಿಸಲಾರೆವು. ಯೌವ್ವನಸ್ಥನು ಇದೇ ಸಂದೇಶವನ್ನು ಕಲಿಯಬೇಕಾಗಿತ್ತು. ಇದು ದೇವರ ಕೃಪೆಯ ಪ್ರತಿಫಲವಾಗಿದೆ. ಇದನ್ನು ನಮ್ಮಷ್ಟಕ್ಕೆ ನಾವೇ ಹೊಂದಲಾರೆವು. ದೇವರ ವರ ಬೇಡವೆಂದು ನಾವು ತಿರಸ್ಕರಿಸಲು ಸಾಧ್ಯ, ಆದರೆ ಇದರ ಕುರಿತಾಗಿ ನೀವು ಎಚ್ಚರಿಕೆಯಿಂದ ಆಲೋಚಿಸುತ್ತೀರೆಂದು ನಾವು ಆಶಿಸುತ್ತೇವೆ. ನಮ್ಮೊಟ್ಟಿಗೆ ಇರುವಂತಹ ಶ್ರೀಮಂತ ಅಥವಾ ಬಡವರಿಗಿಂತ ನಾವು ಉತ್ತಮರೇನಲ್ಲ ಎಂದು ಮೊದಲನೆಯದಾಗಿ ಅರಿತುಕೊಳ್ಳಬೇಕು. ನಾವು ನಿಸ್ಸಾಹಕರೆಂದೂ ನಮನ್ನೇ ನಾವು ನಾವು ನೋಡಿಕೊಳ್ಳಬೇಕು. ನಾವು ಕೂಡಿಸಿಟ್ಟ ಖಜಾನೆಗಳು ಯಾವ ಸಹಾಯಕ್ಕೂ ಬರಲಾರವು.

ಆದ್ದರಿಂದ ಯೇಸುಕ್ರಿಸ್ತ ಹೀಗೆ ಹೇಳಿದ್ದಾನೆ: ''ಭೂಲೋಕದಲ್ಲಿ ಗಂಟುಮಾಡಿ ಇಟ್ಟುಕೊಳ್ಳಬೇಡಿರಿ; ಇಲ್ಲಿ ಅಂತೂ ಅದು ನುಸಿಹಿಡಿದು ಕಿಲುಬುಹತ್ತಿ ಕೆಟ್ಟುಹೋಗುವುದು. ಇಲ್ಲಿ ಕಳ್ಳರು ಕನ್ನಾ ಕೊರೆದು ಕದಿಯುವರು. ಆದರೆ ಪರಲೋಕದಲ್ಲಿ ಗಂಟುಮಾಡಿ ಕೊಳ್ಳಿರಿ; ಅಲ್ಲಿ ಅದು ನುಸಿಹಿಡಿದು ಕಿಲುಬುಹತ್ತಿ ಕೆಟ್ಟುಹೋಗುವುದಿಲ್ಲ; ಅಲ್ಲಿ ಕಳ್ಳರು ಕನ್ನಾ ಕೊರೆಯುವುದಿಲ್ಲ, ಕದಿಯುವುದೂ ಇಲ್ಲ; ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸು ಇರುವುದಷ್ಟೆ'' (ಮತ್ತಾಯ 6:19–21).

ಅದಕ್ಕಾಗಿ ಯೇಸು ಹೀಗೆ ಹೇಳಿದ್ದಾನೆ–''ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ, ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು'' (ಮತ್ತಾಯ6:33).

## ನಮ್ಮ ನಿಜವಾದ ಅಗತ್ಯತೆ

ಯೇಸುಕ್ರಿಸ್ತನ ತ್ಯಾಗಮಯವಾದ ಅರ್ಪಣೆಯನ್ನು ತಿಳಿದುಕೊಂಡು ಸತ್ಯವೇದವನ್ನು ನಮ್ಮೊಟ್ಟಿಗೆ ಮಾತನಾಡಲು ಬಿಡುವುದಾದರೆ ನಮ್ಮ ಬಡತನವನ್ನು ಅರಿಕೆಮಾಡಬೇಕು ಮತ್ತು ನಮ್ಮಪಾಪಗಳು ಹೊದಿಕೆಯಾಗಿದ್ದೇವೆಂದು ಸ್ವೀಕರಿಸಬೇಕು ಎಂಬ ಸಂಗತಿಗಳನ್ನು ನಾವು ಕಾಣುತ್ತೇವೆ. ಹೊಸಜೀವಿತವನ್ನು ತೋರ್ಪಡಿಸುವಂತಹ ನೀರಿನಲ್ಲಿ ದೀಕ್ಷಾಸ್ನಾನ ಹೊಂದುವಂತ ಅಗತ್ಯವನ್ನು ತಿಳಿದುಕೊಳ್ಳಬೇಕಾಗುತ್ತದೆ. ಬರುವ ದೇವರ ರಾಜ್ಯದಲ್ಲಿ ಶಾಶ್ವತವಾಗಿ ಯೇಸುವಿನಿಂದಿಗೆ ಜೀವಿಸಲು ನಾವು ಹೊಸಜೀವನವನ್ನು ಪ್ರಾರಂಭ ಮಾಡಲು ಸಾಂಕೇತಿಕವಾಗಿ ಸೂಚಿಸುವ ಚಿಹ್ನೆಯಾಗಿ(ದೀಕ್ಷಾಸ್ನಾನದ ಕಾರ್ಯ) ಕ್ರಿಸ್ತನೊಂದಿಗೆ ಸಾಯುತ್ತೇವೆ.

''ಇದಲ್ಲದೆ ನಾವು ಕ್ರಿಸ್ತನೊಡನೆ ಸತ್ತ ಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ'' (ರೋಮಾಪುರದವರಿಗೆ 6:8).

ವಿಶ್ವಾಸಿಗಳು ಈ ಸಂಗತಿಯನ್ನು ಅನುಭವಿಸಬೇಕೆಂದು ಅಪೋಸ್ತಲನಾದ ಪೌಲನು ತಂದೆಯಾದ ದೇವರಿಗೆ ಪ್ರಾರ್ಥನೆ ಮಾಡಿದ್ದರಲ್ಲಿ ನಾವು ಆಶ್ಚರ್ಯಪಡಬೇಕಾಗಿಲ್ಲ–''ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರೆಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬುದನ್ನೂ ದೇವಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯವೂ ಎಂಥದೆಂಬುದನ್ನು ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮವೂ ಎಷ್ಟು ಅತಿಶಯವಾದದ್ದೆಂಬುದನ್ನು ನೀವು ತಿಳಿದುಕೊಳ್ಳುವಂತೆ ಅನುಗ್ರಹಿಸಲಿ'' (ಎಫೆಸ 1:18–19).

**–ರಾಯ್ ವಾಡ್ಲೊಪ್**


# ನನ್ನ ಬದುಕನ್ನು ಬದಲಿಸಿದ ದಿನಗಳು

## ನೆಬುಕದ್ನೆಚ್ಚರ

**ಸತ್ಯವೇದದಲ್ಲಿ ಬರುವ ಕೆಲವು ಪಾತ್ರಗಳ ಚಿಂತನೆ ಮತ್ತು ವರ್ತನಾ ಮನೋಭಾವದೊಳಗಿನ ಒಳನೋಟವನ್ನು ನಮಗೆ ಈ ಸರಣಿಯಲ್ಲಿ ಸಿಂಥಿಯಾ ಮೈಲ್ಸ್ ರವರು ತೆರೆದಿಟ್ಟಿದ್ದಾರೆ. ಅವರ ಈ ಲೇಖನಕ್ಕೆ ಗುರಿಯಾದ ವ್ಯಕ್ತಿ ಪ್ರಾಚೀನ ಇತಿಹಾಸದ ಮಹಾಶಕ್ತರಲ್ಲಿ ಒಬ್ಬನು. ಅಂದರೆ–ಬಾಬೆಲಿನ ಚಕ್ರಧಿಪತ್ಯದ ಆಳ್ವಿಕೆಯು ಯಾರದಾಗಿತ್ತೋ, ಅದರದೇ ಆದ ದಿನದಲ್ಲಿ, ಬೃಹತ್ ಪ್ರಾಬಲ್ಯದ ದೊರೆತನ ನಡೆಸಿದವನೂ ಮತ್ತು ಮಿತಿಮೀರೆಗಳಿಲ್ಲದೆ ಶಕ್ತಿಸಾಮರ್ಥ್ಯ ಬಳಸಿ ಪ್ರಾಬಲ್ಯ ಮೆರೆದವನೂ ಆದ ಒಬ್ಬ ಚಕ್ರವರ್ತಿಯ ಕುರಿತಾಗಿದೆ.**

## ಮಹಾಶಕ್ತ ಚಕ್ರವರ್ತಿ

ಒಂದು ಉಕ್ಕಿನಗೆರೆಯಂತಹ ವ್ಯಕ್ತಿತ್ವ ನಿನ್ನಲ್ಲಿ ಇಲ್ಲದೆ ಈ ಪ್ರಪಂಚದಲ್ಲಿ ಅತ್ಯಂತ ಪ್ರಬಲನಾದ ಪುರುಷನಾಗಬೇಡ. ಈ ಪ್ರಪಂಚದಾದ್ಯಂತ ಅತ್ಯಂತ ಪ್ರಾಬಲ್ಯನಾದ ವ್ಯಕ್ತಿ



ನಾನಾಗಿದ್ದೇನಲ್ಲ. ನನಗೆ ಎಲ್ಲವೂ ಇದೆ, ದಿಗ್ವಿಜಯದಿಂದ ಗಳಿಸಿದ ಚಕ್ರಾಧಿಪತ್ಯ, ಬಲವಾದ ಆರ್ಥಿಕ ಸಂಪತ್ತು ಮತ್ತು ಅಧಿಕಾರ ಐಶ್ವರ್ಯಾದಿಂಯಾಗಿ ಸಿಕ್ಕಿದಂಥವುಗಳು, ಅರಮನೆಗಳು ಮತ್ತು ಗಾಳಿಯಲ್ಲೇ ತೇಲುತ್ತವೋ ಎಂಬಂತೆ ಬೆಬ್ಬರಗಾಗಿಸುವ ಉದ್ಯಾನವನಗಳು ಇವೇ ಮಾತ್ರವಲ್ಲ, ಬಹಳಷ್ಟು ದೇಶಗಳಲ್ಲಿ ವಾಸಿಸುವ ಜನರ ಪ್ರತಿಯೊಂದು ಹಾವ–ಭಾವಗಳನ್ನೂ ನಿಯಂತ್ರಿಸುವ ಶಕ್ತಿಯೂ ನನಗೆ ಇದೆ. ಮಹಾತಿಶಯವಾದ ಪುರುಷನಾಗಿ ಸುಮ್ಮನೆ ಹಾಯಾಗಿದ್ದೇನೆ. ಹೀಗಿದ್ದರೂ, ನನ್ನನ್ನೂ ಮೀರಿದ ಒಂದು ದಿವ್ಯಶಕ್ತಿ ಪ್ರಚಲಿತದಲ್ಲಿದೆ ಎಂಬ ಸತ್ಯವನ್ನು ಮನಗಾಣುವಂತೆ ನಾನು ಕಠಿಣ ಪಾಠವನ್ನು ಕಲಿಯುವಂತಾಯಿತು. ಬಹುಕಾಲದಿಂದಲೂ ನನ್ನ ಆಸ್ಥಾನದಲ್ಲಿ ದಾನಿಯೇಲನು ಇದ್ದನಲ್ಲಾ! ಕೆಲವು ದಶಕಗಳ ಹಿಂದೆ ಯೆಹೂದದ ಆ



ಪುಟ್ಟರಾಜ್ಯವನ್ನು ನಾವು ಗೆದ್ದುಕೊಂಡಾಗ ರಾಜಮನೆತನದ ಆವನನ್ನು ನನ್ನ ಅರಮನೆಗೆ ತರಲಾಗಿತ್ತು. ಅವನು ನನಗೆ ಕನಸಿನ ಗೂಢಾರ್ಥವನ್ನು ತಿಳಿಸುವ ಸಾಮರ್ಥ್ಯವುಳ್ಳವನೆಂದು ಬಹುಬೇಗನೇ ತನ್ನದೇ ಆದ ಛಾಪು ಮೂಡಿಸಿಬಿಟ್ಟನು. ಇದು ನನಗೆ ಯಾವಾಗ ಮನವರಿಕೆ ಆಯಿತೆಂದರೆ, ನನ್ನ ಆಸ್ಥಾನದಲ್ಲಿದ್ದ ಬೇರೆಲ್ಲಾ ಜೋಯಿಸರುಗಳು ಶಾಕುನಿಕರೂ ನಾನು ಕಂಡ ಕನಸನ್ನು ತಿಳಿದುಕೊಳ್ಳುವುದರಲ್ಲಿ ಸೋತು ಹೋದದ್ದು ತುಂಬಾ ವಿಷಾದಕರವಾಗಿತ್ತು. ಅದರ ಅರ್ಥವನ್ನೂ ಅವರು ಮನಗಾಣಲೇ ಇಲ್ಲ. ಆದರೆ ಪರಲೋಕದಲ್ಲಿರುವ ಯೆಹೂದ್ಯರ ದೇವರು ತನಗೆ ಎಲ್ಲಾ ಸತ್ಯಸಂಗತಿಗಳನ್ನು ಪ್ರಕಟಿಸುತ್ತಾನೆಂದು ದಾನಿಯೇಲನು ಸಾಧಿಸಿ ತೋರಿಸಿಬಿಟ್ಟನು. ಅಂದಿನಿಂದ ನಾವು ಅನೇಕ ಬಾರಿ ಮಾತುಕತೆಯೊಂದಿಗೆ ಚರ್ಚಿಸಿದ ಬಳಿಕ ದಾನಿಯೇಲನನ್ನು ನನ್ನ ಆಸ್ಥಾನದ ಒಬ್ಬ ರಾಜಕೀಯ ಪ್ರಮುಖನಾಗಿ ಮಾಡಿಕೊಳ್ಳಲಾಯಿತು. ಹೀಗಿದ್ದರೂ ಸಹ ಅವನು ಯಾವಾಗಲೂ ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿದ್ದನು. ಅವನು ತನ್ನ ಸ್ವಧರ್ಮದ ಆಚಾರ–ಅಭ್ಯಾಸಗಳಲ್ಲಿ ಗಂಭೀರವಾಗಿ ತೊಡಗಿರುತ್ತಿದ್ದನು.

## ಭೀಕರ ದುಃಸ್ವಪ್ನ

ಈ ಸಲವೂ ದಾನಿಯೇಲನನ್ನು ನನ್ನಲ್ಲಿಗೆ ಕರೆತರುವಂತೆ ಮಾಡಿದ್ದು ನಾಕಂಡ ಒಂದು ಭೀಕರ ಸ್ವಪ್ನವಲ್ಲದೆ ಮತ್ತೇನು ಆಗಿರಲಿಲ್ಲ. ಮತ್ತೊಂದು ಭೀಕರ ಸ್ವಪ್ನ ನನ್ನ ದೇಶದ ನಡುವೆ ಬಹು ಎತ್ತರವಾದ ಒಂದು ವೃಕ್ಷವಿತ್ತು, ಅದು ಆಕಾಶವೇ ಕಾಣಿಸದಷ್ಟು ಬೃಹದಾಗಿತ್ತು. ಅಂದ–ಚಂದದ ಎಲೆಗಳಿಂದ ಸೊಂಪಾಗಿ ಆವೃತವಾಗಿದ್ದ ಆ ವೃಕ್ಷವು ಬಹಳ ಬಲಾಢ್ಯವಾಗಿತ್ತು, ಫಲಭರಿತವಾಗಿ ತೂಗುತ್ತಿತ್ತು. ಅದರ ಕೊಂಬೆಗಳಲ್ಲಿ ಹಕ್ಕಿಪಕ್ಷಿಗಳು ಹಾಡಿ ನಲಿಯುತ್ತಿದ್ದವು ಮತ್ತು ಸಕಲ ಜೀವಜಂತುಗಳು ಸೂರ್ಯನ ಬಿಸಿಲಿನ ತಾಪಕ್ಕೆ ಮರೆಯಾಗಿ ಅದರಡಿಯ ನೆರಳಿನಲ್ಲಿ ಆಶ್ರಯ ಪಡೆದಿದ್ದವು. ತಕ್ಷಣವೇ ಒಂದು ಗಟ್ಟಿಯಾದ ಕೂಗು ನನಗೆ ಕೇಳಿಸಿ, ಆ ವೃಕ್ಷವು ನಾಶವಾಗುವಂತೆಯೂ ಅದರ 'ಕಬ್ಬಿಣ–ತಾಮ್ರಗಳ ಪಟ್ಟಿಯಿಂದ ಬಿಗಿಯಿಲ್ಪಟ್ಟ ಬುಡದ ಮೋಟನ್ನು' ಮಾತ್ರ ಬಿಟ್ಟು ಉಳಿದೆಲ್ಲವುಗಳೂ ಆ ಜಾಗದಿಂದ ತೆಗೆದು ಹಾಕಲ್ಪಡುವಂತೆ ಆಗ್ರಹಿಸಿತು. ಆಗ ಆ ದುಃಸ್ವಪ್ನವು ಬದಲಾಗಿ ಒಬ್ಬ ಮನುಷ್ಯನ ಕುರಿತಾಗಿ ತಿಳಿಸುತ್ತಾ, ಅವನು ಆಕಾಶದ ಇಬ್ಬನಿಗಳಿಂದ ತೊಯ್ಯುತ್ತಾ, ಮೃಗ ಪಶು–ಗಿಡ ಮರಗಳ ಮಧ್ಯದಲ್ಲಿ ವಾಸಿಸುತ್ತಾ, ದೇವರು ಮಾನವ ರಾಜ್ಯಗಳಲ್ಲೂ ಆಳ್ವಿಕೆ ನಡೆಸುತ್ತಾನೆಂಬ ಸತ್ಯಸಂಗತಿಯನ್ನು ಕಲಿತುಕೊಳ್ಳುವಂತೆ ಏಳು ವರುಷಗಳವರೆಗೂ ಅವನು ಹಾಗೇ ಇರಬೇಕೆಂದು ಆಗ್ರಹಿಸಿತು. ದಿಗಿಲು ಕಳವಳಭರಿತನಾದ ನಾನು ತಕ್ಷಣವೇ ನನ್ನ ಅಪ್ರಯೋಜಕರಾದ ಜೋಯಿಸರು–ಶಾಕುನಿಕರನ್ನು ಕರೇ ಕಳುಹಿಸಿದೆ. ಅದು ದಾನಿಯೇಲನನ್ನೇ ಪುನಃ ಕರೆಯಿಸುವ ಸಮಯವಾಗಿತ್ತು. ದಾನಿಯೇಲನು ಸ್ವಲ್ಪಹೊತ್ತು ಸ್ತಬ್ಧನಾದನು. ಇನ್ನೂ ಬಹುಖಚಿತವಾಗಿ ಆ ಕನಸನ್ನು ಮನಗಾಣದ ಹೊರತು ನನಗೆ ಅದರ ಅರ್ಥವನ್ನು ಹೇಳಲು ಇಚ್ಛಿಸುತ್ತಿಲ್ಲ ಎಂದು ನಾನು ಭಾವಿಸಿದೆನು. ನನಗೆ ಬಹಳ ಪ್ರಿಯನಾದ ಅವನ ಭಯ ನಿವಾರಣೆ ಮಾಡಲು, ಆಗ ಅವನು ಆ ಕನಸು ನನ್ನನ್ನೇ ಕುರಿತಾಗಿದ್ದು ನನ್ನ ವೈರಿಗಳಿಗೆ ಹರ್ಷ ಉಂಟುಮಾಡುವಂಥದ್ದಾಗಿದೆಯೆಂದು ತಿಳಿಸಿದನು. ಆ ವೃಕ್ಷವು ನಾನೇ ಆಗಿದ್ದು, ಯಾರೂ ಸಾಧಿಸಲಾಗದ ಸಾಧನೆ ಮತ್ತು ರಾಜ್ಯಾಧಿಕಾರಿಯಾಗಿ

ಎಲ್ಲಾ ದಿಗ್ವಿಜಯೈಶ್ವರ್ಯಗಳು ನನ್ನ ಆಳ್ವಿಕೆಯ ಅವಧಿಯಲ್ಲಿ ಆಗಿದ್ದವು. ದಾನಿಯೇಲನು ಮುಂತಿಳಿಸುತ್ತಿದ್ದುದು ನನ್ನ ಅಧಿಕಾರ ಪತನವಾಗಿದ್ದು, ನನ್ನ ದುರಹಂಕಾರ ಮತ್ತು ನನಗಿರುವುದೆಲ್ಲಾ ಪರತ್ಪರ ದೇವರಿಂದ ಅನುಗ್ರಹಿಸಲ್ಪಟ್ಟವುಗಳು ಎಂಬ ಸತ್ಯಗ್ರಹಿಕೆಯಲ್ಲಿ ನಾನು ವಿಫಲನಾದ್ದರಿಂದ ತನ್ನ ದೇವರು ನನ್ನನ್ನು ಶಿಕ್ಷಿಸುತ್ತಿರುವುದಾಗಿ ದಾನಿಯೇಲನು ತಿಳಿಸಿದನು.

## ಭೀಕರ ಸ್ವಪ್ನದಿಂದಾದ ಅನುಭವ

ದಾನಿಯೇಲನ ಸಲಹೆಯಂತೆಯೆ ಸ್ವಲ್ಪ ಕಾಲದವರೆಗೆ ನಾನು ಮಾಡುತ್ತಾ, ಬಡವರಿಗೆ ಕರುಣೆ ತೋರಿಸುತ್ತಾ ಹೆಚ್ಚಿನ ದಯದಾಕ್ಷಿಣ್ಯವುಳ್ಳವನಾಗಿ ಇರುತ್ತಿದ್ದಂತೆಯೇ ಕನಸು ಮಾಯವಾಗತೊಡಗಿತು, ಕ್ರಮೇಣ ಮಾಸಗಳು ಸಾಗುತ್ತಿದ್ದಂತೆಯೇ ನಾನು ಅದನ್ನು ಮರೆತು ಬಿಟ್ಟೆ. ಒಂದು ದಿನದ ಉದಯಕಾಲದಲ್ಲಿ ನಾನು ಹೊರಗೆ ನನ್ನ ಸುಂದರವಾದ ಉದ್ಯಾನವನದಲ್ಲಿ ತಿರುಗಾಡುತ್ತಿರುವಾಗ ನನ್ನ ಎಲ್ಲಾ ಸಾಧನೆಗಳನ್ನು ಮನಸ್ಸಿನಲ್ಲಿ ಅವಲೋಕಿಸುತ್ತಿದ್ದೆನು. ನನಗೆ ಗರ್ವದಿಂದ ಬೀಗಲು ಸಾಕಷ್ಟು ಇದ್ದವು ಮತ್ತು ನನಗೆ ನಾನೇ ''ನಾನು ಸಾಧಿಸಿರುವುದನ್ನೆಲ್ಲಾ ನೋಡು!!'' ಈ ಮಾತುಗಳು ನನ್ನ ಬಾಯಿಂದ ಹೊರಡುತ್ತಿದ್ದಂತೆಯೇ ಪರಲೋಕದಿಂದ ಒಂದು ವಾಣಿಯು ಕೇಳಿಬಂತು ''ಅಧಿಕಾರವು ನಿನ್ನಿಂದ ತೆಗೆಯಲ್ಪಟ್ಟಿದೆ''. ನಂತರ ಸಂಭವಿಸುವುದರ ಅರಿವು ನನಗಿರಲಿಲ್ಲ. ಒಡನೆಯೇ ನಾನು ಹುಚ್ಚನಾಗಿ ಹೋಗಿ, ಹೊರಗೆ ವಾಸಿಸುವುದನ್ನು ಒತ್ತಿ ಹೇಳುತ್ತಾ, ಪಶುಪ್ರಾಣಿಗಳೊಂದಿಗೆ ಪಶುವಿನಂತೆಯೇ ಜೀವಿಸಿ, ಆಳ್ವಿಕೆ ಮಾಡಲು ಅಸಹಾಯಕನಾಗಿ ಏಳು ವರ್ಷಗಳವರೆಗೆ ಹಾಗೆಯೇ ಇರಬೇಕೆಂದು ಆ ವಾಣಿಯು ಹೇಳಿತಲ್ಲಾ! ನಾನು ಖಂಡಿತವಾಗಿಯೂ ಕತ್ತರಿಸಲ್ಪಟ್ಟು ಒಂದು ಗಾತ್ರಕ್ಕೆ ಇಳಿದಿದ್ದೆನು.



ಇಗೋ, ನನ್ನ ಬುದ್ಧಿಯು ಗುಣವಾಗಿದೆ ಮತ್ತು ನನ್ನ ಅಧಿಕಾರವು ಮತ್ತೆ ನನ್ನ ಕೈ ಸೇರಿದೆ. ಆದರೆ ನನ್ನ ವರ್ತನಾ ಮನೋಭಾವ ಬದಲಾಗಿದೆ! ನನ್ನ ದುರಹಂಕಾರದ ಶುದ್ಧಿಗಾಗಿ ನಾನು ಶಿಕ್ಷಿಸಲ್ಪಟ್ಟೆನೆಂದು ನನಗೆ ಗೊತ್ತಾಗಿದೆ. ಪರಾತ್ಪರನಾದ ದೇವರು ನಮ್ಮ ಈ ಭೂರಾಜ್ಯಗಳಲ್ಲಿ ಆಳ್ವಿಕೆ ನಡೆಸುತ್ತಿದ್ದಾನೆ. ಆತನು ರಾಷ್ಟ್ರಪತಿಗಳನ್ನು ಸೃಷ್ಟಿಸುತ್ತಾನೆ, ಪ್ರಧಾನ ಮಂತ್ರಿಗಳನ್ನೂ ಮತ್ತು ಚಕ್ರವರ್ತಿಗಳನ್ನೂ ಅಧಿಕಾರಕ್ಕೆ ತರುತ್ತಿದ್ದಾನೆ ಅಥವಾ ತನ್ನ ಇಷ್ಟ ಬಂದವರನ್ನು ತೆಗೆಯುತ್ತಿದ್ದಾನೆ.

ನಾವು ದೇವರಿಗೆ ಉತ್ತರಿಸಬೇಕು, ದೇವರು ನಮಗೆ ಉತ್ತರಿಸುವುದಿಲ್ಲ. ನಾನು ಈಗ ಆತನನ್ನು ಬಹಳ ಚೆನ್ನಾಗಿ ಅರ್ಥ ಮಾಡಿಕೊಳ್ಳುವಂತೆ ದಾನಿಯೇಲನು ನನಗೆ ಸಹಾಯ ಮಾಡಿದ್ದಾನೆ ಹಾಗೂ ನೀತಿ–ನ್ಯಾಯವಾಗಿರುವ ಪರಲೋಕದೇವರನ್ನು ನಾನು ಕೀರ್ತಿಸುತ್ತೇನೆ. **''ಯಾವದಿನ''** ನಾನು ನನ್ನ ವರ್ತನಾ ಮನೋಭಾವಕ್ಕೆ ಸವಾಲೆಸೆದ ಆತನ ವಾಣಿಯನ್ನು ಕೇಳಿಸಿಕೊಂಡೆನೋ **''ಆ ದಿನ''** ನಾನು ಯೋಗ್ಯವಾದುದನ್ನು ಕಲಿತುಕೊಂಡ ***''ದಿನ''***ವಾಗಿತ್ತು.

''ಎಷ್ಟೇ ಅತ್ಯಂತ ಮಹಾದೊಡ್ಡವನಾದರೂ ಮನುಷ್ಯನು ಚಿಕ್ಕವನೇ ಅಲ್ಲವೇ!!''

**–ಸಿಂಥಿಯಾ ವೈಲ್ಸ್**




# ಹೊಣೆಗಾರಿಕೆ

## (ಲಘು ಧ್ಯಾನ)

ಈ ತನಕ ನಿಮ್ಮ ಮನಸ್ಸಿಗೆ ಹೊಳೆದಿರುವ ಅತ್ಯಂತ ಮಹತ್ವಪೂರ್ಣ ವಿಚಾರ ಯಾವುದು? ಎಂದು **ಡ್ಯಾನಿಯಲ್ ವೆಬ್‌ಸ್ಟರ್** ಅವರನ್ನು ಕೇಳಿದಾಗ ಅವರು ನೀಡಿದ ಉತ್ತರ: ***''ಸರ್ವಶಕ್ತ ದೇವರ ದೆಸೆಯಲ್ಲಿ ನನಗಿರುವ ಹೊಣೆಗಾರಿಕೆಯ ಬಗ್ಗೆ''.***

ದೇವರಿಗೆ ಲೆಕ್ಕ ಒಪ್ಪಿಸುವುದೇ ಅತ್ಯಂತ ಮಹತ್ವಪೂರ್ಣ ಸಂಗತಿಯೆಂದು ಅನೇಕರಿಗೆ ಅನ್ನಿಸಿರಲಿಕ್ಕಿಲ್ಲ, ಅವರು ಜೀವನ ಸಾಗಿಸುವ ರೀತಿಯನ್ನು ಗಮನಿಸಿದರಂತೂ ಅವರ ಗುರಿ ದೇವರನ್ನು ಮೆಚ್ಚಿಸುವುದಲ್ಲ ಎಂಬುದು ತಿಳಿಯುತ್ತದೆ. ಜೀವನ ನಶ್ವರ ಅಥವಾ ತಾತ್ಕಾಲಿಕ ಇರುವಷ್ಟು ದಿವಸ ತಿಂದು, ಕುಡಿದು ಮಜಾ ಮಾಡುವ ಎಂಬ ಅಭಿಪ್ರಾಯ ಹೊಂದಿರುತ್ತಾರೆ.



ಸ್ವಲ್ಪ ಆಲೋಚಿಸಿದರೆ ದೇವರ ಮಹಿಮೆಯು ಎಷ್ಟು ಅಪಾರವಾದದ್ದು ಎಂಬುದು ತಿಳಿದುಬರುತ್ತದೆ. ತಂದೆಯ(ದೇವರ) ಅರಿವಿಗೆ ಬಾರದೆ ಒಂದು ಗುಬ್ಬಚ್ಚಿಯೂ ನೆಲಕ್ಕೆ ಬೀಳುವುದಿಲ್ಲ'' ಎಂಬ ಯೇಸುಸ್ವಾಮಿಯ ಮಾತನ್ನು ನೆನಪಿಗೆ ತಂದುಕೊಂಡರೆ ನಮ್ಮ ಕಾರ್ಯಗಳೆಲ್ಲಾ ದೇವರಿಗೆ ತಿಳಿದಿರುವಂತವೇ ಎನ್ನುವುದು ಅರ್ಥವಾಗುತ್ತದೆ. ಸಾಮಾನ್ಯವಾಗಿ ಹೇಳುವುದಾದರೆ, ಇಡೀ ವಿಶ್ವವೇ ದೇವರಿಗೆ ಸ್ಪಷ್ಟೀಕರಣ ನೀಡುವ ಹೊಣೆಗಾರಿಕೆಯನ್ನು ಹೊಂದಿದೆ. ಏಕಂದರೆ ಹಕ್ಕಿ ನೆಲಕ್ಕೆ ಬಿದ್ದಾಗ ಅದರ ಅಂತ್ಯವು ದೇವರಿಗೆ ತಿಳಿದಿರುತ್ತದೆ. ಹೀಗೆಯೇ ಅನೇಕ ಮನುಷ್ಯರ ವಿಚಾರದಲ್ಲಿಯೂ ಕೂಡ. ಅವರು ಮರಳುಗಾಡಿನಲ್ಲಿ ಹೂವರಳುವ ಹಾಗೆ ಹುಟ್ಟಿ ಸಾಯುತ್ತಾರೆ, ಸ್ವಲ್ಪ ಕಾಲದ ನಂತರ ಅವರು ಭೂಮಿಯ ಮೇಲೆ ಹುಟ್ಟಿ ಬದುಕಿದ್ದರ ಯಾವ ಗುರುತೂ ಉಳಿಯುವುದಿಲ್ಲ.

ಹೀಗೆ ದೇವರ ಬಗೆಗಿನ ನಮ್ಮ ಜ್ಞಾನದಿಂದ, ಆತನ ಕಟ್ಟಳೆಗಳನ್ನು ಕೈಗೊಂಡು ನಡೆಯುವ ಬದ್ಧತೆಯನ್ನು ನಾವು ರೂಢಿಸಿಕೊಂಡದ್ದೇ ಆದರೆ, ನಿತ್ಯಜೀವವೆಂಬ ಮಹಾಭಾಗ್ಯಕ್ಕೆ ಬಾಧ್ಯಸ್ಥರಾಗುತ್ತೇವೆ ಎನ್ನುವುದು ನಿಜವಾಗಿಯೂ ಮನುಷ್ಯನ ಮನಸ್ಸಿಗೆ ಹೊಳೆಯಬಹುದಾದ ಅತ್ಯಂತ ಮಹತ್ವಪೂರ್ಣ ವಿಚಾರವೇ ಆಗಿದೆ.

ನಮ್ಮ ಸಭೆಯು ಭಾನುವಾರಗಳಂದು ಬಾಡಿಗೆಗೆ ಪಡೆಯುವ ಸಭಾಂಗಣದಲ್ಲಿ ''ಜ್ಞಾನವೇ ಶಕ್ತಿ'' ಎಂದು ಬರೆದಿರುವ ಫಲಕ ಒಂದು ಮುಖ್ಯ ಗೋಡೆಯ ಮೇಲ್ಭಾಗದಲ್ಲಿ ತೂಗುಹಾಕಲ್ಪಟ್ಟಿದೆ. ದೇವರ ಬಗೆಗಿನ ಜ್ಞಾನದ ಶಕ್ತಿ ಎಷ್ಟೆಂಬುದನ್ನು ಮನಗಂಡರೆ ನಾವು ದಂಗಾಗುತ್ತೇವೆ. ದೈವ ಜ್ಞಾನವೇ ನಮ್ಮನ್ನು ರಕ್ಷಣಾ ಯೋಗ್ಯರಾಗತಕ್ಕ ವಿವೇಕಿಗಳನ್ನಾಗಿ ಮಾಡುತ್ತದೆ ಮತ್ತು ನ್ಯಾಯ ತೀರ್ಪಿನ ದಿನದಂದು ಮರಣ ಹೊಂದಿದವರನ್ನು ಪುನರುತ್ಥಾನಗೊಳಿಸುತ್ತದೆ. ಜ್ಞಾನವೇ ತನ್ನ ಮಹಾಶಕ್ತಿಯಿಂದ ಸರ್ವಶಕ್ತ ದೇವರ ಮುಂದೆ

ನಾವು ಲೆಕ್ಕಬದ್ಧರಾಗಲು ಪ್ರೇರೇಪಿಸುತ್ತದೆ. ಯಾಕೋಬನು ಹೀಗೆ ತಿಳಿಸುತ್ತಾನೆ: "ಒಳ್ಳೆಯ ಕೆಲಸ ಯಾವುದೆಂದು ತಿಳಿದೂ ಅದನ್ನು ಮಾಡದವನು ಪಾಪವೆಸಗುವವನಾಗಿದ್ದಾನೆ". ನಾವು ಮಾಡಬೇಕಾದದ್ದೇನು ಮತ್ತು ದೇವರ ಮುಂದೆ ನಮ್ಮ ಹೊಣೆಗಾರಿಕೆ ಏನು ಎಂಬುದನ್ನು ಅರಿತ ಮೇಲೆ ನಾವೇನು ಮಾಡಬೇಕು ಎನ್ನುವುದೇ ಈಗಿನ ಪ್ರಶ್ನೆಯಾಗಿದೆ. ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಹೀಗೆ ತಿಳಿಸುತ್ತಾನೆ: "ಪ್ರತಿಯೊಬ್ಬನೂ ತನ್ನತನ್ನ ವಿಷಯವಾಗಿ ದೇವರ ಮುಂದೆ ಉತ್ತರ ಕೊಡಬೇಕು".

"ನಾವು ವಿನಾಕಾರಣ(ಸುಮ್ಮನೆ) ಆಡುವ ಪ್ರತಿಯೊಂದು ಮಾತಿನ ವಿಷಯಕ್ಕೂ ನ್ಯಾಯತೀರ್ಪಿನ ದಿನದಂದು ಉತ್ತರ ಕೊಡಬೇಕು" ಎಂಬ ಯೇಸುಸ್ವಾಮಿಯ ಮಾತನ್ನು ನಾವು ಅರ್ಥ ಮಾಡಿಕೊಂಡಿದ್ದೇವೆಯೇ ಎನ್ನುವುದನ್ನು ನಮ್ಮ ಬದುಕಿನ ರೀತಿಯು ಪ್ರತಿಬಿಂಬಿಸುತ್ತಿದೆಯೇ? ಏಕೆಂದರೆ ನಮ್ಮ ಮಾತುಗಳಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಡುತ್ತೇವೆ ಮತ್ತು ನಮ್ಮ ಮಾತುಗಳಿಂದಲೇ ಅಪರಾಧಿಗಳೆಂದು ತೀರ್ಪು ಹೊಂದುತ್ತೇವೆ. ಇದನ್ನು ತಿಳಿದೇ ಪೌಲನು ಹೀಗೆಂದು ಎಚ್ಚರಿಕೆ ನೀಡುತ್ತಾನೆ. "ಪ್ರತಿಯೊಬ್ಬರಿಗೂ ಹೇಗೆ ಉತ್ತರಿಸಬೇಕು ಎಂಬುದನ್ನು ಅರಿತುಕೊಳ್ಳುವಂತೆ ನಿಮ್ಮ ಮಾತು ಯಾವಾಗಲೂ ಕೃಪೆಯಿಂದ ಕೂಡಿ(ಉಪ್ಪಿನಿಂದ ಕೂಡಿರಲಿ) ರಸವತ್ತಾಗಿಯೂ ಇರಲಿ".

ನಾಲಿಗೆಯಿಂದ ಉಂಟಾಗಬಹುದಾದ ಅಪಾಯಗಳು ಮತ್ತು ಕೆಡಕುಗಳ ವಿಷಯವಾಗಿ ಅಪೋಸ್ತಲನಾದ ಯಾಕೋಬನು ನಮ್ಮನ್ನು ಎಚ್ಚರಿಸುತ್ತಾನೆ. ದೇವರು ನಾವಾಡುವ ಮಾತುಗಳನ್ನು ಮಾತ್ರವಲ್ಲ ನಮ್ಮ ಆಲೋಚನೆಗಳನ್ನೂ ಬಲ್ಲವನಾದುದರಿಂದ, ನಮ್ಮ ಹೊಣೆಯನ್ನು ನಾವು ಮರೆಯಲಾಗದು. ತನ್ನ ಯಜಮಾನನಿಗೆ ಲೆಕ್ಕ ಕೊಡಲಿಕ್ಕಿದೆ ಎಂದರಿತೂ ತನ್ನ ಪಾಲಿನ ತಲಾಂತನ್ನು ಮಣ್ಣಿನಲ್ಲಿ ಮುಚ್ಚಿಟ್ಟ ಮೂರ್ಖ ಸೇವಕನಂತೆ ನಾವಾಗುವುದಿಲ್ಲ ಎಂದು ನಿರೀಕ್ಷಿಸೋಣ. ತನ್ನ ಯಜಮಾನನು ಹಿಂದಿರುಗಿ ಬರುತ್ತಾನೆ ಎಂದು ಅವನಿಗೆ ಗೊತ್ತಿತ್ತು, ತಲಾಂತಿನ ವಿಷಯದಲ್ಲಿ ಲೆಕ್ಕ ಕೊಡಲಿಕ್ಕಿದೆ ಎಂಬುದೂ ತಿಳಿದಿತ್ತು. ಆದಾಗ್ಯೂ ಅವನು ಸುಮ್ಮನಿದ್ದುಬಿಟ್ಟ, ಈ ಮೂರ್ಖ ಸೇವಕನಂತೆ ನಾವಾಗದೆ ನಮಗೆ ದೇವರು ಕೊಟ್ಟ ತಲಾಂತುಗಳನ್ನು ನೆಲದಲ್ಲಿ ಬಚ್ಚಿಡದೆ ಎಚ್ಚರವಹಿಸುವುದು ಅಗತ್ಯ; ನಾವು ಮಾಡಬೇಕಾಗಿರುವುದು ಕೇವಲ ಪ್ರಯತ್ನಪಡುವುದಷ್ಟೇ, ಫಲ ಕೊಡುವುದು ದೇವರೆ. ಆದರೆ ನಾವು ಪ್ರಯತ್ನವೇ ಪಡದೆ ಕೂತರೆ ದೇವರ ಸಹಾಯವಾಗಲೀ, ಫಲವಾಗಲೀ ದೊರೆಯುವುದಿಲ್ಲ.

ನಿಜವಾಗಿಯೂ ಜ್ಞಾನವು ಶಕ್ತಿಯೇ, ಅಪೋಸ್ತಲನಾದ ಪೌಲನ ಇಚ್ಛೆಯು ಯೇಸುಕ್ರಿಸ್ತನನ್ನು ಮತ್ತವನ ಪುನರುತ್ಥಾನದ ಶಕ್ತಿಯನ್ನು ಅರಿತುಕೊಳ್ಳುವುದೇ ಆಗಿತ್ತು. ಜ್ಞಾನವೂ ನಂಬಿಕೆಯ ಹಾಗೆ ಏಕಾಂಗಿಯಾಗಿರುವುದಾದರೆ ನಿಷ್ಪ್ರಯೋಜನವಾಗುತ್ತದೆ.

ವಾಸ್ತವವಾಗಿ ಅಪೋಸ್ತಲನಾದ ಪೇತ್ರನು ಹೇಳುವುದೇನೆಂದರೆ, ನೀತಿಮಾರ್ಗವನ್ನು ಅರಿತಾದ ನಂತರ ಪವಿತ್ರ ಆಜ್ಞೆಗಳಿಂದ ವಿಮುಖರಾಗುವುದಕ್ಕಿಂತ ಅದನ್ನು ಅರಿಯದಿರುವುದೇ ಮೇಲು. ನೀತಿಮಾರ್ಗವನ್ನು ಅರಿತಾಗ ಮಾತ್ರ ನಮಗೆ ಹೊಣೆಗಾರಿಕೆಯ ಅರಿವೂ ಉಂಟಾಗುತ್ತದೆ. ಆದುದರಿಂದ ದೇವರ ವರದಾನದಿಂದ ಪಶ್ಚಾತ್ತಾಪಕ್ಕೆ ಒದಗುವ ಕೆಲಸಗಳಿಗಾಗಿ ನಮ್ಮ ಜ್ಞಾನವನ್ನು ಉಪಯೋಗಿಸಿದಾಗ, ಯೇಸುಕ್ರಿಸ್ತನು ಹಿಂದಿರುಗಿ ಬಂದಾಗ ಮೆಚ್ಚುಗೆಯಿಂದ **"ಭಲೆ"** ಎನ್ನುವನು.



# ಯೇಸು ಬೇತ್ಸಥಾದಲ್ಲಿ ಒಬ್ಬ ರೋಗಿಯನ್ನು ಸ್ವಸ್ಥಪಡಿಸಿದ್ದು

ಬೇತ್ಸಥಾ ಎಂಬ ಹೆಸರಿಗೆ **"ಕರುಣೆಯ ಮನೆ"** ಎಂದರ್ಥ. ಅಂದರೆ ಯೇಸು ಮಾಡಿದ ಅದ್ಭುತ ಕಾರ್ಯಕ್ಕೆ ಆ ಸ್ಥಳದ ಹೆಸರು ತಕ್ಕದ್ದಾಗಿತ್ತು. ಈ ಕುರಿತ ವಿಷಯವನ್ನು ನೀವು ಯೋಹಾನನ ಸುವಾರ್ತೆ 5ನೇ ಅಧ್ಯಾಯ 2ರಿಂದ9ನೇ ವಚನಗಳಲ್ಲಿ ಓದಬಹುದು.

ಬೇತ್ಸಾಥಾದಲ್ಲಿ ನಡೆದ ಈ ಘಟನೆಯು ಯೇಸು ಬೇರೆ ಎಲ್ಲಾ ಸ್ಥಳಗಳಲ್ಲಿ ಮಾಡಿದ್ದ ಅದ್ಭುತಕಾರ್ಯಗಳಿಗಿಂತ ಭಿನ್ನವಾದುದಾಗಿತ್ತು. ಬೇತ್ಸಥಾವು ಯೆರೂಸಲೇಮಿನ ಕುರಿಬಾಗಿಲಿನ ಹತ್ತಿರವಿರುವ ಒಂದು ಕೊಳವಾಗಿತ್ತು. ರೋಮನ್ನರ ಇತರ ಸ್ನಾನಕೊಳಗಳಿಗೆ ಹೋಲಿಸಿದರೆ ಜನರು ಈ ಬೇತ್ಸಥಾ ಕೊಳಕ್ಕೆ ಸ್ವಸ್ಥ ಹೊಂದಿಕೊಳ್ಳುವ ಸ್ನಾನಕ್ಕಾಗಿ ಬರುತ್ತಿದ್ದರು. ಈ ಕಾರ್ಯ ನಡೆದ ದಿನದಲ್ಲಿಯೂ ಎಂದಿನಂತೆ ಆ ಕೊಳದ ಬಳಿ ರೋಗಿಗಳೂ, ಕುರುಡರೂ, ಕುಂಟರೂ, ಮೈ ಒಣಗಿದವರೂ ಆಗಿದ್ದ ಬಹುಮಂದಿ ಜನರು ನೀರು ಉಕ್ಕುವುದಕ್ಕಾಗಿ ಕಾಯುತ್ತಿದ್ದರು(ವಚನ 3). ಅವರೆಲ್ಲರು ಒಬ್ಬ ದೇವದೂತನು ಆಗಾಗ್ಗೆ ಕೊಳದಲ್ಲಿ ಇಳಿದು ಬಂದು ನೀರನ್ನು ಉಕ್ಕಿಸುವನು; ನೀರನ್ನು ಉಕ್ಕಿಸಿದ ಮೇಲೆ ಮೊದಲು ಒಳಗೆ ಹೋದವನು ಯಾವ ರೋಗದಲ್ಲಿ ಬಿದ್ದಿದ್ದರೂ ಸ್ವಸ್ಥನಾಗುವನು ಎಂದು ನಂಬಲ್ಪಟ್ಟಿದ್ದರು. ಆದರೆ ಸತ್ಯವೇದದ ಉಳಿದ ಭಾದದಲ್ಲಿ ಈ ಕುರಿತಾಗಿ ಯಾವ ಆಧಾರವೂ ಸಿಕ್ಕುವುದಿಲ್ಲ. ಇದು ನಿಜವಾಗಿಯೂ ಆ ಅಸ್ವಸ್ಥರು ತಾವು ಗುಣವಾಗಲ್ಪಡುವವೆಂಬ ನಂಬಿಕೆಯು ನಿರೀಕ್ಷೆಯನ್ನು ವಿಶ್ವಾಸವನ್ನೂ ಗಳಿಸಿಕೊಂಡಿರುವ ಒಂದು ಮೂಢನಂಬಿಕೆಯಾಗಿತ್ತು.



## 38 ವರ್ಷಗಳಿಂದ ರೋಗ

ಯೇಸು ಬೇತ್ಸಥಾದಲ್ಲಿ ಮಾಡಿದ ಮೊದಲನೆಯ ಸಂಗತಿಯೇನೆಂದರೆ, ಅಲ್ಲಿ ಮೂವತ್ತೆಂಟು ವರ್ಷಗಳಿಂದ ರೋಗಿಯಾಗಿ ಬಿದ್ದಿದ್ದ ಒಬ್ಬನನ್ನು ಭೇಟಿ ಮಾಡಿ ಮಾತನಾಡಿಸಿ ನಿನಗೆ ಸ್ವಸ್ಥನಾಗಲು ಮನಸ್ಸುಂಟೋ? ಎಂದು ಅವನನ್ನು ಕೇಳಿದ್ದಕ್ಕೆ ಆ ರೋಗಿಯು–ಸ್ವಾಮಿ ನೀರು ಉಕ್ಕುವಾಗ ನನ್ನನ್ನು ಕೊಳದೊಳಗೆ ಇಳಿಸುವವರು ಒಬ್ಬರೂ ಇಲ್ಲ; ನಾನು ಬರುವುದರೊಳಗಾಗಿ ನನಗಿಂತ ಮುಂದಾಗಿ ಮತ್ತೊಬ್ಬನು ಇಳಿಯುತ್ತಾನೆ ಅಂದನು. ಯೇಸು

ಅವನಿಗೆ ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ ಎಂದು ಹೇಳಿದನು. ಆ ಕ್ಷಣವೇ ಆ ರೋಗಿ ಸ್ವಸ್ಥನಾಗಿ ತನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆದನು(ವಚನ 6–9).

ಈ ಅದ್ಭುತ ಕಾರ್ಯ ನಡೆದ ದಿನ ಸಬ್ಬತ್ ದಿವಸವಾಗಿತ್ತು. ಈ ರೀತಿಯಾಗಿ ಆ ಮನುಷ್ಯನ ರೋಗ ಗುಣವಾಗಿತ್ತು. ಇಲ್ಲಿ ಯಾವುದೇ ದೇವದೂತ ಬಂದಿರಲಿಲ್ಲ ಮತ್ತು ನೀರನ್ನು ಉಕ್ಕಿಸಿರಲಿಲ್ಲ ಅಥವಾ ನೀರಿನಲ್ಲಿ ಮುಳುಗಲು ಹೋರಾಟ ಮಾಡಿ ಮುನ್ನುಗ್ಗುವ ಅವಕಾಶ ಬರಲೇ ಇಲ್ಲ. ಇದು ಅತ್ಯಂತ ಅದ್ಭುತವಾದ ದೇವರ ಶಕ್ತಿಭರಿತನಾದ ಯೇಸುಕ್ರಿಸ್ತ ಕೇವಲ ಮಾತಿನಿಂದಲೇ ಆ ವ್ಯಕ್ತಿಯ 38 ವರ್ಷಗಳ ಕಾಲದ ರೋಗ ಗುಣವಾಗಿತ್ತು.

## ಸಬ್ಬತ್ ದಿನದಲ್ಲಿ ಉಂಟಾದ ಕರುಣೆ

ಯೇಸುಕ್ರಿಸ್ತ ಅನೇಕ ಸಂದರ್ಭಗಳಲ್ಲಿ ಅನೇಕ ರೋಗಿಗಳನ್ನು ಸ್ವಸ್ಥಮಾಡುವಾಗ, ಆತ ಅವರಿಗೆ ನಾನು ಗುಣಪಡಿಸುತ್ತೇನೆ ಎಂಬ ನಂಬಿಕೆ ನಿಮಗೆ ಇದೆಯೇ? ಎಂದು ಕೇಳಿದ್ದಾನೆ. ಆದರೆ, ಇಲ್ಲಿ ಯೇಸು ಬೇರೆಯದೇ ರೀತಿಯಾಗಿ ಈ ಕಾರ್ಯ ನಡೆಯುವ ಹಾಗೆ ಮಾಡಿದ್ದಾನೆ. ನಿನಗೆ ಗುಣವಾಗಲು ಮನಸ್ಸುಂಟೋ ಎಂದು ರೋಗಿಯನ್ನೇ ಕೇಳಿದ್ದಾನೆ ಮತ್ತು ಈ ಕಾರ್ಯದ ಮೂಲಕ ಯೆಹೂದ್ಯರಿಗೆ ದೇವರ ಕಾರ್ಯ ನಡೆಯುವುದನ್ನು ಸಾಕ್ಷೀಕರಿಸಿದ್ದಾನೆ.

ಯೇಸುಕ್ರಿಸ್ತ ಆಜ್ಞೆ ಮಾಡಿದ್ದಾನೆ, ಅದರಂತೆ ರೋಗಿ ಗುಣವಾಗಿ ತನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆದನು. ಆದರೆ ಯೆಹೂದ್ಯರು ಇದು ಆಜ್ಞೆಯನ್ನು ಮುರಿಯುವಂತಾಗಿದೆ ಎಂದು ಮನಸ್ಸಿನಲ್ಲಿ ಚಡಪಡಿಸುತ್ತಿದ್ದರು. ಹೀಗಾಗಿ ಅವರು ಸ್ವಲ್ಪವು ತಡಮಾಡದೆ ಆ ರೋಗಿಯು ತನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆಯುತ್ತಿರುವುದನ್ನು ನೋಡಿ ಗದರಿಸಿ–"ಈ ಹೊತ್ತು ಸಬ್ಬತ್ ದಿನವಾಗಿದೆ, ನೀನು ಹಾಸಿಗೆಯನ್ನು ಹೊರುವುದು ಸರಿಯಲ್ಲವೆಂದು ಹೇಳಿದರು" (ವಚನ 10). ಅದಕ್ಕೆ ಆ ಮನುಷ್ಯನು ಉತ್ತರವಾಗಿ: "ನನ್ನನ್ನು ಸ್ವಸ್ಥ ಮಾಡಿದವನೇ ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ" ಎಂದು ನನಗೆ ಹೇಳಿದನು ಅಂದನು. ಅವನ ಅರ್ಥವೇನೆಂದರೆ ಆತನು ಅವನಿಗೆ ತನ್ನ ಹಾಸಿಗೆಯನ್ನು ಹೊತ್ತುಕೊಂಡು ಮನೆಗೆ ಹೋಗ ಬಹುದೆಂದು ಹೇಳಿದ್ದಾಗಿತ್ತು. ಅಂದರೆ ಸಬ್ಬತ್ ದಿನದಂದು ಒಬ್ಬ ರೋಗಿಯನ್ನು ಸ್ವಸ್ಥ ಮಾಡುವುದು ಧರ್ಮವಾದರೆ ಖಂಡಿತವಾಗಿಯೂ ಆತನು ತನ್ನ ಹಾಸಿಗೆಯನ್ನು ಮನೆಗೊಯ್ಯುವುದೂ ಸಹ ಧರ್ಮವಾಗಿದೆ.

## ಸಬ್ಬತ್ತಿನ ಧರ್ಮ(ಕಾನೂನು)

ನಿಜವಾಗಿಯೂ ಧರ್ಮಶಾಸ್ತ್ರದಲ್ಲಿ ಈ ಸಬ್ಬತ್ ದಿನವನ್ನು ಕುರಿತು ಹೀಗೆ ಹೇಳಲ್ಪಟ್ಟಿದೆ: "ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವುದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಆರು ದಿವಸಗಳಲ್ಲಿ ನೀನು ಕೆಲಸವನ್ನೆಲ್ಲಾ ಮಾಡಬೇಕು, ಏಳನೆಯ ದಿನವು ನಿನ್ನ ದೇವರಾದ ಯೆಹೋವನಿಗೆ ಮೀಸಲಾದ ವಿಶ್ರಾಂತಿ ದಿನವಾಗಿದೆ. ಆದರಲ್ಲಿ ನೀನು ಯಾವ ಕೆಲಸವನ್ನೂ ಮಾಡಬಾರದು. ನಿನ್ನ ಗಂಡು ಮಕ್ಕಳು, ಹೆಣ್ಣು ಮಕ್ಕಳು, ಗಂಡಾಳು, ಹೆಣ್ಣಾಳು, ಪಶುಗಳು ನಿನ್ನ ಊರಲ್ಲಿ ಇರುವ ಅನ್ಯದೇಶದವರು ಯಾವ ಕೆಲಸವನ್ನು ಮಾಡಬಾರದು. ಆರು ದಿನಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನು, ಸಮಸ್ತವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ನಿರ್ಮಾಣ ಮಾಡಿ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು. ಆದುದರಿಂದ ಯೆಹೋವನು ಸಬ್ಬತ್ ದಿನವನ್ನು ತನ್ನ ದಿನವಾಗಲಿ ಎಂದು ಆಶೀರ್ವದಿಸಿದನು" (ವಿಮೋಚನಾಕಾಂಡ 20:8–11).



ಯಾಜಕಕಾಂಡ 23:7–8ನೇ ವಾಕ್ಯಗಳಲ್ಲಿರುವ ಈ "**ಕೆಲಸ**" ಎಂಬ ಶಬ್ಧವು ದಾಸತ್ವ ಎಂಬ ಕ್ರಿಯಾಧಾತುವಿನೊಂದಿಗೆ ಸೇರಿ ವಿವರಿಸಲ್ಪಟ್ಟಿದೆ. ಅಥವಾ ಇನ್ನೂ ಕೆಲವು ಪ್ರತಿಗಳಲ್ಲಿ ವೃತ್ತಿ(ಕಸುಬು) ಎಂಬುದಾಗಿ ಕೊಡಲ್ಪಟ್ಟಿದೆ. ಏಕಂದರೆ ಯಾಜಕರು ಮತ್ತು ಲೇವಿಯರು ಮಾಡಬೇಕಾದ ಕೆಲಸಗಳು(ಕರ್ತವ್ಯಗಳು) ಸಬ್ಬತ್ ದಿನದ ಆಚರಣೆಗಳು ಇವುಗಳನ್ನು ಒಳಗೊಂಡಿರುವುದಿಲ್ಲ. ಯಾಜಕಕಾಂಡ 23ನೇ ಅಧ್ಯಾಯವನ್ನು ಸ್ಪಷ್ಟಪಡಿಸುವುದಕ್ಕಾಗಿ ಈ ಕ್ರಿಯಾಧಾತುವು ಕೊಡಲ್ಪಟ್ಟಿದೆ. ಆದರೆ ಇದರಲ್ಲಿ ಸಬ್ಬತ್ ದಿನದಂದು "**ಕೆಲಸ**" ಮಾಡಬಹುದೆಂಬುದನ್ನು ನಿಷೇಧಿಸಿಲ್ಲ. ಈ ವೃತ್ತಾಂತಗಳ ಮೂಲಕ ರೋಗಿಯನ್ನು ಸ್ವಸ್ಥ ಪಡಿಸುವುದು ಯಾವ ವರ್ಗಕ್ಕೆ ಸೇರಿದೆ ಎಂಬುದನ್ನು ನಾವು ನಿರ್ಧರಿಸದರೆ, ಈ ಕಾರ್ಯವು ದಾಸತ್ವ ಅಥವಾ ವೃತ್ತಿ ಎಂಬುದಕ್ಕೆ ಪರಿಗಣಿಸಲ್ಪಡುವುದಿಲ್ಲ. ಅದು ಸಹ ಯಾಜಕರಿಂದ ನಡೆಸಲ್ಪಡುವ ಕೆಲಸದಂತೆ "**ಆಶೀರ್ವದಿಸಲ್ಪಟ್ಟದ್ದು**" ಎಂಬ ಮಾನ್ಯತೆ ಪಡೆಯುತ್ತದೆ. ಯೇಸು ಏಕೆ ಕೆಲವು ಸಮಯಗಳಲ್ಲಿ ಸಬ್ಬತ್ ದಿನದಂದು ಅದ್ಭುತ(ಸ್ವಸ್ಥಪಡಿಸಿದನು) ನಡೆಸಿದನು ಎಂಬುದಕ್ಕೆ ಮತ್ತೊಂದು ಕಾರಣವೂ ಇತ್ತು. ಏಕಂದರೆ ಆತನಿಗೆ ತಾನು ಅಧಿಕಾರಿಗಳಿಂದ ತಿರಸ್ಕರಿಸಲ್ಪಟ್ಟು ಶಿಲುಬೆಗೆ ಹಾಕಲ್ಪಡುವೆನು ಮತ್ತು ಈ ಲೋಕದ ಪಾಪಗಳಿಗಾಗಿ ತನ್ನನ್ನು ಒಂದು ಸಂಪೂರ್ಣ ಬಲಿಯಾಗಿ ಅರ್ಪಿಸಲ್ಪಡಲು ಸಾಮರ್ಥ್ಯವುಳ್ಳವನು ಎಂಬುದು ತಿಳಿದಿತ್ತು (ಯೋಹಾನ 1:29). ಈ ಕಾರ್ಯವು ಸಂಭವಿಸಲೇ ಬೇಕಿತ್ತು. ಯೆಹೂದ್ಯರು ಯೇಸುವನ್ನು ತಿರಸ್ಕರಿಸಿ ಶಿಲುಬೆಗೆ ಜಡಿಯಲ್ಪಡಲು ಆತನು ಸಬ್ಬತ್ ದಿನದಲ್ಲಿ ರೋಗಿಗಳನ್ನು ಸ್ವಸ್ಥ ಪಡಿಸಿದ್ದು ಸಹ ಒಂದು ಬಲವಾದ ಕಾರಣವಾಗಿತ್ತು.

## ಕಡೆಯ ಮಾತುಗಳು

ಯೋಹಾನನ ಸುವಾರ್ತೆಯ ಐದನೆಯ ಅಧ್ಯಾಯದ ಉಳಿದ ಭಾಗದಲ್ಲಿ ಯೇಸು ಹೀಗೆ ಪುನಃ ಆ ಸ್ವಸ್ಥಹೊಂದಿದವನನ್ನು ಸಂಧಿಸಿ, ಇನ್ನುಮೇಲೆ ಪಾಪ ಮಾಡಬೇಡ ನಿನಗೆ ಹೆಚ್ಚಿನ ಕೇಡು ಬಂದೀತು ಎಂದು ಹೇಳಿದ್ದನ್ನು ವಿವರವಾಗಿ ವರ್ಣಿಸಲ್ಪಟ್ಟಿದೆ. ಆಗ ಯೇಸು ಎಲ್ಲೆಡೆ ಪ್ರಕಾಶಗೊಳಿಸಲ್ಪಟ್ಟನು ಮತ್ತು ಆತನ ವಿರೋಧಿಗಳು ಇನ್ನೂ ಹೆಚ್ಚಾಗಿ ಎಬ್ಬಿಸಲ್ಪಟ್ಟರು. ಆನಂತರ ಯೇಸು ತನ್ನನ್ನು ಸುತ್ತುವರೆದಿದ್ದ ವಿರೋಧಿಗಳಿಗೆ ಹಾಗೂ ಇನ್ನೂ ಅನುಕಂಪದಿಂದ ತನ್ನ ಮಾತುಗಳನ್ನು ಕೇಳುತ್ತಿದ್ದ ಜನಗಳ ಮಧ್ಯದಲ್ಲಿ ತನ್ನ ಮತ್ತು ತಂದೆಯ ನಡುವಿನ ನಿಕಟ ಸಂಬಂಧವನ್ನು ಹಾಗೂ ತಂದೆಯು ತನಗೆ ನೀಡಿರುವ ಅದ್ಭುತ ಬಲದಿಂದ ತಾನು ಏನೆಲ್ಲಾ ಮಾಡುವೆನೆಂಬ ಮುಖ್ಯವಾದ ಮಾತುಗಳನ್ನು ಪ್ರಕಟಿಸಿದನು. ಯೇಸು ತಿರುಗಿ ಹೇಳಿದ್ದೇನೆಂದರೆ– "ಸಮಾದಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವುದು, ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವುದು" (ಯೋಹಾನ 5:28–29).

ಈ ವಾಕ್ಯವು ಯೇಸು ತನ್ನ ಎರಡನೆಯ ಬರೋಣದಲ್ಲಿ ಈ ಭೂಮಿಯ ಮೇಲೆ ಸ್ಥಾಪಿಸುವ ತಂದೆಯ ರಾಜ್ಯದಲ್ಲಿ ಯಾರ್ಯಾರು ಒಳ್ಳೇದನ್ನು ಮಾಡಿರುವವರೋ ಅವರೆಲ್ಲರೂ ಹೊಂದುವ 1000 ವರುಷಗಳ ಸಬ್ಬತೆಂಬ **ವಿಶ್ರಾಂತಿಯನ್ನು** ಸೂಚಿಸುತ್ತದೆ.

**–ರಾಲ್ಫ್ ಗ್ರೀನ್**